# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



With Your support we reach
100000
HAMPI TIMES E-PAPER VIEWS
PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com
Thank You



ಸಂಪುಟ:01 Volume:01 • ಸಂಚಿಕೆ:156 Issue:156 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 1311.2023 13.11.2023 • ಸೋಮವಾರ Monday • ಪುಟ:04 Page:04 • ಬೆಲೆ:2 Rs:2












# ಲಕ್ಷ್ಮೀ ಆಹ್ವಾನಿಸಲು ಸಕಲ ಸಿದ್ಧತೆ

■ **ಹಂಪಿ ಟೈಮ್ಸ್ ಹೊಸಪೇಟೆ:**

ಬರದ ನಡೆವೆಯೂ ಲಕ್ಷ್ಮೀಯನ್ನು ಆಹ್ವಾನಿಸಲು ಮನೆ, ಅಂಗಡಿ ಮಳಿಗೆಗಳ ಸಿಂಗಾರ ಜೋರಾಗಿ ನಡೆದಿದೆ. ನಗರದ ಸೇರಿದಂತೆ ಜಿಲ್ಲೆಯಲ್ಲಿ ಮೂರು ದಿನಗಳ ಕಾಲ ಆಚರಿಸಲಾಗುವ ದೀಪಾವಳಿ ನಿಮಿತ್ತ ಭಾನುವಾರ ಹಬ್ಬದ ಖರೀದಿ ಜೋರಾಗಿತ್ತು. ನಗರದ ಗಾಂಧಿ ಸರ್ಕಲ್, ಮೇನ್ ಬಜಾರ್, ಸಂಗೋಳ್ಳಿ ರಾಯಣ್ಣ ಸರ್ಕಲ್, ಮದಕರಿವೃತ್ತ, ಪುಣ್ಯಮೂರ್ತಿ ವೃತ್ತ, ನಗರಸಭೆ ಸೇರಿದಂತೆ ನಾನಾ ಕಡೆ ಕಬ್ಬು, ಬಾಳೆದಿಂಡು, ಹೂ-ಹಣ್ಣು ಖರೀದಿ ಭರ್ಜರಿಯಾಗಿ ನಡೆಯಿತು. ವರ್ಷದಲ್ಲಿ ನಾಲ್ಕೈದು ಹಬ್ಬಗಳಲ್ಲಿ ಒಂದಿಷ್ಟು ಹಣ ಮಾಡಬೇಕೆಂದು ಬಂಡವಾಳ ಹಾಕಿ ಬೀದಿ ಬದಿಯಲ್ಲಿ ಮಾರಾಟ ಮಾಡುವವರ ಸಂಖ್ಯೆ ಹೆಚ್ಚಿತ್ತು. ಆದರೆ ಮಾರಾಟಗಾರರು ಹೇಳುವ ಬೆಲೆಗಿಂತ ಕಡಿಮೆ ಕೇಳುವ ಸದ್ಗುಣವುಳ್ಳ ಗ್ರಾಹಕರು ಕಡಿಮೆ ಹಣ ನೀಡಲು ಚೌಕಾಸಿ ಮಾಡಿ ಖರೀದಿಸಿದರು. ರೈತ ತಂದೆ ಬಾಳೆ, ಹೂಗಳನ್ನು ಬೆಳಿಗ್ಗೆ ಸ್ವಲ್ಪ ದುಬಾರಿ ಬೆಲೆಗೆ ಮಾರಿದರೂ, ಸಂಜೆಯಾಗುತ್ತಿದ್ದಂತೆ ಬೆಲೆ ಇಳಿಸಿ ಮಾರಾಟ ಮಾಡಿದರು. ಮನೆಗಳಲ್ಲಿ ಮಾವು, ಹೂವು, ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು. ಅಮವಾಸ್ಯೆ ಎರಡು ದಿನ ಬಂದಿದ್ದರಿಂಧ ಕೆಲವರು ಭಾನುವಾರ ಸಂಜೆ ಲಕ್ಷ್ಮೀ ಪೂಜೆ ಮಾಡಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ದೀಪಾವಳಿ ಸೊಬಗು ಕಾಣಲು ಮನೆಯ ಮುಂಭಾಗದಲ್ಲಿ >> 4









ಸೋಮವಾರ / Monday 13.11.2023
ಹಂಪಿ ಟೈಮ್ಸ್ HAMPI TIMES

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ರೂಲ್ ಬ್ರೇಕ್ ಮಾಡೋದೇ ರೂಲ್ಸ್ ಆದರೆ ಏನು ಪ್ರಯೋಜನ ?

ರಸ್ತೆ ಅಪಘಾತಗಳು ಇವೇ ಕಾರಣಗಳಿಂದ ನಡೆಯುತ್ತವೆ ಎಂದು ಹೇಳುವುದು ಕಷ್ಟ. ರಸ್ತೆ ಅಪಘಾತಗಳು ಸಂಭವಿಸುವುದರ ಹಿಂದೆ ಸರ್ಕಾರದ ತಪ್ಪುಗಳು ಎಷ್ಟಿವೆಯೋ ಅಷ್ಟೇ ತಪ್ಪುಗಳು ಸವಾರರಿಂದಲೂ ಆಗುತ್ತವೆ ಎಂಬುದೂ ಅಷ್ಟೇ ಸತ್ಯ. ಸಾಮಾನ್ಯವಾಗಿ ನಾವು ಕೇಳಿಸಿಕೊಳ್ಳುವುದೇನೆಂದರೆ ಹದಗೆಟ್ಟ ರಸ್ತೆಗಳಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತವೆ ಎಂಬುದು. ಆದರೆ, ನೆನಪಿಡಿ. ಉತ್ತಮ ರಸ್ತೆಗಳಿಂದಲೂ ಅಪಘಾತಗಳು ಸಂಭವಿಸುತ್ತವೆ. ಹಾಗಂತ ಉತ್ತಮ ರಸ್ತೆಗಳು ಇರಬಾರದು ಎಂದು ಇದರ ಅರ್ಥವಲ್ಲ. ಉತ್ತಮ ರಸ್ತೆಗಳಲ್ಲಿ ಸವಾರರು ಅತಿಯಾದ ವೇಗದಲ್ಲಿ ಕಾರಾಗಲಿ, ಬೈಕಾಗಲಿ ಓಡಿಸುತ್ತಾರೆ. ಇದು ಅಪಘಾತಗಳಿವೆ ಕಾರಣವಾಗುತ್ತವೆ. ಉತ್ತಮ ರಸ್ತೆಗಳಿದ್ದರೂ ತಿರುವುಗಳಲ್ಲಿ ಸೂಚನೆ ಫಲಕ ಇಲ್ಲದಿರುವುದು, ಅಪಘಾತ ವಲಯಗಳಲ್ಲಿ ರಸ್ತೆ ಉಬ್ಬುಗಳು (ರೋಡ್ ಹಂಪ್ಸ್) ಇಲ್ಲದಿರುವುದು ಕೂಡಾ ಅಪಘಾತಗಳಿವೆ ಕಾರಣವಾಗುತ್ತಿವೆ. ಅದರಲ್ಲೂ ರಾತ್ರಿ ವೇಳೆ ಎದುರಿನಿಂದ ಬರುವ ವಾಹನಗಳು ಭಯಂಕರ ಬೆಳಕಿನ ದೀಪಗಳನ್ನು ಹಾಕಿಕೊಂಡು ಬಂದಾಗ ರಸ್ತೆ ಪಕ್ಕದಲ್ಲಿ ತಗ್ಗು ಇದೆಯೋ, ಹೊಂಡವಿದೆಯೋ, ಬಂಡೆಯಿದೆಯೋ, ರಸ್ತೆಯ ಕೊನೆ ಯಾವುದು ಎಂಬುದೂ ಗೊತ್ತಾಗುವುದಿಲ್ಲ. ಇದಕ್ಕೆಲ್ಲ ಸರ್ಕಾರ ಪರಿಹಾರ ಹುಡುಕಬೇಕಿದೆ. ಹದಗೆಟ್ಟ ರಸ್ತೆಗಳಿಂದ ಅಪಘಾತಗಳು ಸಂಭವಿಸುವುದು ಸರ್ವೇ ಸಾಮಾನ್ಯವಾಗಿದೆ. ಎಲ್ಲೆಂದರಲ್ಲಿ ರಸ್ತೆ ಹುಬ್ಬುಗಳು, ರೋಡ್ ಹಂಪ್ಸ್ ಇವೆಯೆಂಬ ಸೂಚನೆಗಳು ಕಾಣದ ರಸ್ತೆಗಳು, ತಗ್ಗುಗಳ ಆಳ ಎಷ್ಟು ಎಂಬುದು ಅಂದಾಜಿಗೆ ನಿಲುಕದ ಪರಿಸ್ಥಿತಿ, ಅದನ್ನು ತಪ್ಪಿಸಲು ಹೋಗಿ ಸಂಭವಿಸುವ ಅವಾಂತರಗಳು.. ಇವೆಲ್ಲ ರಸ್ತೆ ಅಪಘಾತಗಳಿವೆ ಕಾರಣವಾಗುತ್ತಿವೆ. ಇದರಲ್ಲಿ ಸರ್ಕಾರದ ತಪ್ಪಗಳು ಎಷ್ಟಿವೆಯೋ, ಅದರಷ್ಟೇ ಜನರ ತಪ್ಪುಗಳು ಸಹ ಇವೆ. ಹೈವೇಯಲ್ಲಿ ಉತ್ತಮ ರಸ್ತೆ ಇರುವ ಕಾರಣ ಅತಿಯಾದ ವೇಗದ ಚಾಲನೆ ಅಪಾಯಕ್ಕೆ ಮುನ್ಸೂಚನೆ ಎಂದು ಗೊತ್ತಿದ್ದರೂ ಚಾಲಕರು ವೇಗದಿಂದ ವಾಹನ ಚಲಾಯಿಸುವುದು ನಿಯಂತ್ರಣಕ್ಕೆ ಬರಬೇಕು. ಬೈಕ್ ಸವಾರರು ತಾವು ಸಿನಿಮಾ ಹೀರೋಗಳಲ್ಲ ಎಂಬುದನ್ನು ಅರಿತು ಗಾಡಿ ಓಡಿಸಬೇಕು. ತಮಗೆ ಭಯಂಕರ ಚಾಲನಾ ಅನುಭವವಿದೆ ಎಂದು ಕಾರ್ ಚಾಲಕರು ಡ್ರೈವಿಂಗ್ ಅನ್ನು ಎರ?ರಾಬಿರ?ರಿ ಓಡಿಸುವುದನ್ನು ಕಂಟ್ರೋಲ್ ಮಾಡಿಕೊಳ್ಳಬೇಕು. ಸವಾರರ ಈ ಅತಿಯಾದ ನಡವಳಿಕೆಯಿಂದ ತಮ್ಮ ಜೀವವಲ್ಲದೆ, ಎದುರಿನ ವಾಹನದಲ್ಲಿರುವವರ ಜೀವವನ್ನೂ, ಅವರ ಕುಟುಂಬವನ್ನೂ ಆತಂಕಕ್ಕೆ ತಳ್ಳುತ್ತಾರೆ. ಎಲ್ಲರ ಜೀವಗಳೂ ಅಮೂಲ್ಯ. ರಸ್ತೆಗಳು ನಮ್ಮವೇ, ವಾಹನಗಳು ನಮ್ಮವೇ, ಪ್ರಯಾಣಿಕರು ನಮ್ಮವರೇ.. ಹೀಗಿರುವಾಗ ಅಪಘಾತ ಸಂಭವಿಸಲು ಇರುವು ಸನ್ನಿವೇಶಗಳನ್ನು, ಅತಿರೇಕದ ವರ್ತನೆಗಳನ್ನು ನಾವೆಲ್ಲ ಕಂಟ್ರೋಲ್ ಮಾಡಬೇಕಿದೆ. ರಸ್ತೆಗಳ ಗುಣಮಟ್ಟ ಸುಧಾರಿಸಲು ಸರ್ಕಾರದ ಮೇಲೆ ಒತ್ತಡ ಹಾಕೋಣ. ಉತ್ತಮ ರಸ್ತೆಗಳನ್ನು ನಿರ್ಮಿಸಿಕೊಳ್ಳೋಣ. ಅದರ ಮೇಲೆ ಸುಖಮಯ ಮತ್ತು ಸುರಕ್ಷಿತ ಚಾಲನೆ ಮಾಡೋಣ. ಎಲ್ಲರ ಜೀವ ಉಳಿಸೋಣ ಎಂಬ ಧ್ಯೇಯ ನಮ್ಮೆಲ್ಲರದಾಗಿರಬೇಕು. ಹೀಗಿದ್ದಾಗ ವಾಹನಗಳ ಆಯುಷ್ಯ ಸಹ ದೀರ್ಘವಾಗಿ ಬಾಳಿಕೆ ಬರುತ್ತವೆ. ಮೆಂಟೇನೆನ್ಸ್ ಕಡಿಮೆ ವೆಚ್ಚದಲ್ಲಿ ಆಗುತ್ತದೆ. ಮೈಲೇಜ್ ಹೆಚ್ಚಿಗೆ ಬರುತ್ತದೆ. ನಾಳೆಯಿಂದಲೇ ಸುರಕ್ಷಿತ ಪ್ರಯಾಣ ನಮ್ಮೆಲ್ಲರದಾಗಲಿ. ಸಂಚಾರಿ ರೂಲ್ಸ್ ಬ್ರೇಕ್ ಮಾಡೋದೇ ನಮ್ಮ ರೂಲ್ಸ್ ಆಗದಿರಲಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ತಮಸೋಮ ಜ್ಯೋತಿರ್ಗಮಯ

**"ಅಸತೋಮಾ ಸದ್ಗಮಯ
ತಮಸೋಮ ಜ್ಯೋತಿರ್ಗಮಯ
ಮೃತ್ಯೋರ್ಮ ಅಮೃತಂಗಮಯ
ಓಂ ಶಾಂತಿ ಶಾಂತಿ ಶಾಂತಿಃ"**

ಅಸತ್ಯದಿಂದ ಸತ್ಯದೆಡೆಗೆ, ಕತ್ತಲಿನಿಂದ ಬೆಳಕಿನೆಡೆಗೆ, ಮೃತ್ಯುತ್ವದಿಂದ ಅಮರತ್ವದೆಡೆಗೆ ನಮ್ಮನ್ನು ಕೊಂಡೊಯ್ಯುವ ಜ್ಯೋತಿ ಸ್ವರೂಪಕ್ಕೆ ನಮಸ್ಕಾರಗಳು.

ಮನುಷ್ಯ ಜೀವನದ ಏಕತಾನತೆಯನ್ನು ಕಳೆಯುವ ಆಚರಣೆಗಳೇ ಹಬ್ಬಗಳು, ಆ ಹಬ್ಬಗಳ ಆಚರಣೆಯಲ್ಲಿರುವ ವೈವಿಧ್ಯತೆಗಳು, ಹಬ್ಬದ ಹಿಂದಿರುವ ಆಶಯಗಳು, ನಮ್ಮಲ್ಲಿ ಹೊಸ ಹುರುಪನ್ನು, ಭರವಸೆಯನ್ನು ತುಂಬುತ್ತವೆ.ಭಾರತೀಯ ಜೀವನ ಪದ್ಧತಿಯಲ್ಲಂತೂ ಹಬ್ಬಗಳು ತುಸು ಹೆಚ್ಚೇ. ಬಹುಶಃ ಜಗತ್ತು ಕಂಡು ಕೇಳರಿಯದಷ್ಟು ಧರ್ಮಗಳು, ಜಾತಿಗಳು, ಉಪಜಾತಿಗಳು ನಮ್ಮ ಭರತ ಖಂಡದಲ್ಲಿವೆ. ಹೀಗಾಗಿ ಆಯಾ ಧರ್ಮದ, ಜಾತಿಯ ನಂಬಿಕೆಯ ಆಚರಣೆಗಳು ಕಾಲಕ್ರಮೇಣ ಹಬ್ಬದ ರೂಪವನ್ನು ಕಂಡುಕೊಂಡಿವೆ.

ರಾಮನು ಸ್ವರ್ಣಲಂಕೆಯಲ್ಲಿ ರಾಕ್ಷಸೇಂದ್ರ ರಾವಣನನ್ನು ಕೊಂದು, ಆತನ ಸಹೋದರ ವಿಭೀಷಣನಿಗೆ ಪಟ್ಟ ಕಟ್ಟಿ, ಅಯೋಧ್ಯೆಯೆಡೆಗೆ ಪ್ರಯಾಣ ಬೆಳೆಸಿದ. ಕಾರ್ತಿಕದ ಆ ಕತ್ತಲಿನಲ್ಲಿ ರಾಮನ ಸ್ವಾಗತಕ್ಕಾಗಿ ಇಡೀ ಅಯೋಧ್ಯಾ ರಾಜ್ಯವೇ ದೀಪವನ್ನು ಹಚ್ಚಿ ಸ್ವಾಗತ ಕೋರಿತು. ಅದರ ಸವಿ ನೆನಪಿನ ದಿನವೇ ದೀಪಾವಳಿ. ದೀಪಾವಳಿ ಹಬ್ಬವು ದುಷ್ಟದಮನ ಮತ್ತು ಶಿಷ್ಟರಕ್ಷಣೆಯ ಪ್ರತೀಕವಾಗಿ ಆಚರಿಸಲ್ಪಡುವ ಹಬ್ಬ.

ದೀಪಗಳ ಹಬ್ಬ ದೀಪಾವಳಿ. ಅಜ್ಞಾನವನ್ನು ಕಳೆಯುವ ಜ್ಞಾನ ಜ್ಯೋತಿ ಬೆಳಗಿಸುವ ಹಬ್ಬ ದೀಪಾವಳಿ. ತಮಸೋಮ ಜ್ಯೋತಿರ್ಗಮಯ ಅಂದರೆ ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಹಬ್ಬ ದೀಪಾವಳಿ. ದೀಪಾವಳಿ ಹಬ್ಬವು ವರ್ಷದ ಅತಿ ದೊಡ್ಡ ಹಬ್ಬವಾಗಿದೆ. ಹಿಂದುಗಳು, ಸಿಕ್ಕರು ಮತ್ತು ಜೈನರು ಈ ಹಬ್ಬವನ್ನು ಆಚರಿಸುತ್ತಾರೆ. ಜಾಗತೀಕರಣದ ಈ ಘಳಿಗೆಯಲ್ಲಿ ಇಡೀ ಪ್ರಪಂಚದಾದ್ಯಂತ ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ. ಕಾರ್ತಿಕ ಮಾಸದ ಅಮಾವಾಸ್ಯೆಯ ದಿನ ಲಕ್ಷ್ಮಿ ಪೂಜೆಯನ್ನು ಮಾಡುವ ಮೂಲಕ ಮತ್ತು ಮರುದಿನ ಬಲಿಪಾಡ್ಯಮಿಯಂದು ಸರಸ್ವತಿ ಪೂಜೆಯ ಮೂಲಕ ಸಾಂಕೇತಿಕವಾಗಿ ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ.

ಗ್ರಾಮೀಣ ಭಾಗದಲ್ಲಂತೂ ದೀಪಾವಳಿ ಹಬ್ಬದ ಸಡಗರ ಇನ್ನೂ ಹೆಚ್ಚು. ದಸರೆಯ ನಂತರ ಇಡೀ ಮನೆಯನ್ನು ಸ್ವಚ್ಛಗೊಳಿಸಿ ಸುಣ್ಣ ಬಣ್ಣ ಹಚ್ಚಿಸಿ ಮನೆಯನ್ನು ಸಿಂಗರಿಸುತ್ತಾರೆ. ಬಗೆ ಬಗೆಯ ದೀಪದ ಸರಗಳನ್ನು ತಂದು ಮನೆಯನ್ನು ಅಲಂಕರಿಸುತ್ತಾರೆ. ಮನೆ ಮಂದಿಗೆಲ್ಲಾ ಹಬ್ಬದ ಬಟ್ಟೆ, ಸ್ವಲ್ಪ ಅನುಕೂಲ ಹೆಚ್ಚೇ ಇದ್ದರೆ ಚಿನ್ನದ ಒಡವೆ, ವಾಹನ ಮತ್ತು ಗೃಹೋಪಯೋಗಿ ಸಾಮಾನುಗಳನ್ನು ಹಬ್ಬದ ಸಮಯದಲ್ಲಿ ಖರೀದಿಸುತ್ತಾರೆ. ಈ ಸಮಯದಲ್ಲಿ ಅಂಗಡಿಕಾರರೂ ಅಷ್ಟೇ ...ಬಗೆ ಬಗೆಯ ಆಮಿಷಗಳನ್ನು, ರಿಯಾಯಿತಿ ದರಗಳನ್ನು ಜನರ ಮುಂದಿಟ್ಟು ಭರ್ಜರಿ ವ್ಯಾಪಾರ ನಡೆಸುತ್ತಾರೆ. ಮಾರುಕಟ್ಟೆಯ ಸಮೀಕ್ಷೆಯ ಪ್ರಕಾರ ಇಡೀ ವರ್ಷದ ವ್ಯಾಪಾರ ವಹಿವಾಟು ನಡೆಯುವಷ್ಟೇ ಭರ್ಜರಿ ವ್ಯಾಪಾರ ವಹಿವಾಟು ದೀಪಾವಳಿಯ ಆ 15 ದಿನಗಳ ಸಮಯದಲ್ಲಿ ನಡೆಯುತ್ತದೆ. ಎಲ್ಲ ವ್ಯಾಪಾರಸ್ಥರು, ಫ್ಯಾಕ್ಟರಿಗಳ ಮಾಲಕರು ದೊಡ್ಡ ದೊಡ್ಡ ವ್ಯಾಪಾರಿ ಸಂಸ್ಥೆಗಳು ತಮ್ಮ ನೌಕರರಿಗೆ ಒಂದು ತಿಂಗಳ ಬೋನಸ್ ಹಣವನ್ನು ನೀಡುವುದು ಕೂಡ ದೀಪಾವಳಿಯ ಸಮಯದಲ್ಲಿಯೇ. ಒಂದಿಡೀ ವರ್ಷದ ಸಂತಸವನ್ನು ಒಮ್ಮೆಲೆ ಮನೆಗೆ ತರುವುದೆಂದರೆ ಅದು ದೀಪಾವಳಿಯಲ್ಲಿ ಮಾತ್ರ.ದೀಪಾವಳಿಯನ್ನು ಮೂರ್ನಾಲ್ಕು ದಿನಗಳವರೆಗೆ ಆಚರಿಸುತ್ತಾರೆ. ಅಮಾವಾಸ್ಯೆಗೆ ಎರಡು ದಿನ ಮುಂಚೆ ತ್ರಯೋದಶಿಯ ದಿನ ನೀರು ತುಂಬುವ ಹಬ್ಬ. ಆ ದಿನ ಮನೆಯ ಎಲ್ಲಾ ನೀರು ತುಂಬಿಸುವ ಸಣ್ಣ ದೊಡ್ಡ ಪಾತ್ರೆಗಳನ್ನು ಹುಣಸೆಹಣ್ಣು ಹಾಕಿ ತಿಕ್ಕಿ ಲಕ ಲಕ ಎನ್ನುವಂತೆ ತೊಳೆದು ನೀರನ್ನು ತುಂಬಿಸಿ ಸಾಂಕೇತಿಕವಾಗಿ ದೇವರ ಜಗಲಿಯ ಮೇಲೆ ತುಂಬಿದ ನೀರಿನ ತಂಬಿಗೆಯನ್ನು ಇಟ್ಟು ಪೂಜಿಸುತ್ತಾರೆ. ಇನ್ನೂ ಕೆಲವೆಡೆ ಆ ದಿನ ನಸುಕಿನಲ್ಲಿಯೇ ಮನೆಯ ಎಲ್ಲಾ ಹಿರಿ ಕಿರಿಯರನ್ನು ಎಬ್ಬಿಸಿ ಅವರಿಗೆ ತಲೆ ಮತ್ತು ದೇಹಕ್ಕೆಲ್ಲಾ ಎಣ್ಣೆಯನ್ನು ಹಚ್ಚಿ ಬಿಸಿನೀರಿನ ಅಭ್ಯಂಗ ಸ್ನಾನ ಮಾಡಿಸಿ ಹೊಸ ಬಟ್ಟೆಯನ್ನು ಧರಿಸಲು ನೀಡಿ, ನಂತರ ಮಣೆಯ ಮೇಲೆ ಕೂರಿಸಿ ತಿಲಕವನ್ನು ಹಚ್ಚಿ, ಕಂಕಣ ಕಟ್ಟಿ, ಆರತಿಯನ್ನು ಮಾಡಿ ಸಿಹಿಯನ್ನು ತಿನ್ನಿಸುತ್ತಾರೆ. ಹೀಗೆ ಎಣ್ಣೆ ಸ್ನಾನ ಮಾಡಿಸಿಕೊಂಡ ಮಕ್ಕಳು ಚಳಿಗಾಲದ ಆ ಚುಮು ಚುಮು ನಸುಕಿನಲ್ಲಿ ಹಿರಿಯರ ಕಣ್ಗಾವಲಿನಲ್ಲಿ ಪಟಾಕಿಗಳನ್ನು ಹಾರಿಸುತ್ತಾರೆ. ಹೆಂಗಳೆಯರು ಅಡುಗೆ ಮನೆ ಸೇರಿ ಹಬ್ಬದ ಅಡುಗೆ ಮಾಡಿದರೆ, ಮನೆಯ ಪುರುಷರು ಹೊಲಗದ್ದೆಗಳಲ್ಲಿ ತಿರುಗಾಡಿ ಪೂಜೆಗೆ ಬೇಕಾಗುವ ಬಾಳೆಲೆಯ ಕಂಬಗಳು, ಮಾವಿನ ತೋರಣದ ಎಲೆಗಳು, ಹೂವುಗಳು, ವೀಳ್ಯ ದೆಲೆ,ಹಣ್ಣುಗಳು ಹೀಗೆ ತಮ್ಮ ನಿಲುಕಿನಲ್ಲಿರುವ ಎಲ್ಲಾ ವಸ್ತುಗಳನ್ನು ತರುತ್ತಾರೆ. ಸ್ವಲ್ಪ ದೊಡ್ಡ ಊರುಗಳಲ್ಲಾದರೆ ಇವೆಲ್ಲವೂ ಮಾರುಕಟ್ಟೆಯಲ್ಲಿ ಲಭ್ಯವಾಗುವುದರಿಂದ ತಮ್ಮ ಶಕ್ತ್ಯಾನುಸಾರ ಖರೀದಿಸುತ್ತಾರೆ. ಮಧ್ಯಾಹ್ನ ಹಬ್ಬದ ಅಡುಗೆ ಸವಿದು ಗಡದ್ದಾಗಿ ನಿದ್ದೆ ಮಾಡುವರು. ಮನೆ ಮನೆಯಲ್ಲೂ ನೆಂಟರಿಷ್ಟರು, ಮಾತು, ಹರಟೆ, ತಮಾಷೆಗೆ ಕೊರತೆಯೇ ಇಲ್ಲ. ಈ ತ್ರಯೋದಶಿಯ ದಿನವನ್ನು ಉತ್ತರ ಭಾರತದಲ್ಲಿ ಧನತೆರೇಸ ಎಂಬ ಹೆಸರಿನಲ್ಲಿ ಆಚರಿಸುತ್ತಾರೆ. ಈ ದಿನದಂದು ಏನನ್ನೇ ಖರೀದಿಸಿದರೂ ಅದು ಅಕ್ಷಯವಾಗುತ್ತದೆ ಎಂಬ ಬಲವಾದ ನಂಬಿಕೆ.

ಮರುದಿನ ಮುಂಜಾನೆ ಹಿರಿಯರ ಹಬ್ಬ. ಅಷ್ಟೇನೂ ವಿದ್ಯಾವಂತರಲ್ಲದ ಕಾಲದಿಂದಲೂ, ತಿಥಿ, ದಿನಗಳನ್ನು ನೆನಪಿಟ್ಟುಕೊಳ್ಳಲಾಗದ ನಮ್ಮ ಜನರು



ಹಬ್ಬ-ಹುಣ್ಣಿಮೆಗಳಲ್ಲಿ, ಮದುವೆಗಳಲ್ಲಿ ಗತಿಸಿಹೋದ ಹಿರಿಯರನ್ನು ಕಳಶಗಳಲ್ಲಿ ಆಹ್ವಾನಿಸಿ, ಬಟ್ಟೆ ಬರೆಗಳನ್ನು ಏರಿಸಿ, ಪೂಜಿಸಿ, ಅವರಿಗಿಷ್ಟವಾದ ಅಡುಗೆ ತಯಾರಿಸಿ ಅವರಿಗೆ ಎಡೆ ಇರಿಸಿ ಆ ಗತಿಸಿ ಹೋದ ಹಿರಿಯರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸಿ ತನ್ಮೂಲಕ ಅವರ ಹಾರೈಕೆಯನ್ನು ಪಡೆದೆವು ಎಂಬ ತೃಪ್ತ ಭಾವ ಹೊಂದುವ ದಿನವೇ ಈ ಹಿರಿಯರ ಹಬ್ಬ. ಇಂದು ಕೂಡ ಮನೆಯ ಎಲ್ಲಾ ಹಿರಿಕಿರಿಯ ಸದಸ್ಯರು ಗತಿಸಿ ಹೋದ ಹಿರಿಯರ ಫೋಟೋಗಳನ್ನು, ಅವರು ಬಳಸುತ್ತಿದ್ದ ವಸ್ತುಗಳನ್ನು ಹೊಸ ಬಟ್ಟೆಗಳನ್ನು ಅವರಿಗೆ ಏರಿಸಿ ಪೂಜಿಸುತ್ತಾರೆ. ಅಂದು ಕೂಡ ಹೋಳಿಗೆಯ ಅಡುಗೆ ಮಾಡಿ ಎಡೆ ಹಾಕಿ ತಾವು ಕೂಡ ಊಟ ಮಾಡುತ್ತಾರೆ.

ಇನ್ನು ಅಮಾವಾಸ್ಯೆಯ ದಿನ ತಾಯಿ ಲಕ್ಷ್ಮಿ ದೇವಿಯನ್ನು ಪೂಜಿಸಿ, ಆರಾಧಿಸುವ ದಿನ. ಆ ದಿನ ಪೂರ್ವಾಹ್ನದ ವೇಳೆ ಪೂಜೆಯ ನಿಯಮವಿರುವವರು ತಮ್ಮ ತಮ್ಮ ಮನೆಗಳಲ್ಲಿ ನಿಶ್ಚಿತವಾದ ಜಾಗಗಳಲ್ಲಿ ಮಹಾಲಕ್ಷ್ಮಿಯ ವಿಗ್ರಹವನ್ನು ಫೋಟೋವನ್ನು ಇಟ್ಟು ಅದರ ಮುಂದೆ ಶಾಸ್ತ್ರೋಕ್ತವಾಗಿ ಕಳಶಸ್ಥಾಪನೆ ಮಾಡಿ ಗಣಪತಿ ಪೂಜೆ, ಸಂಕಲ್ಪ,



**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ**

ಮಹಾಲಕ್ಷ್ಮಿ ಪೂಜೆ ಮಾಡಿ ಹೋಳಿಗೆ ಪಾಯಸಗಳ (ಗೋಧಿ ಹುಗ್ಗಿಯ), ಕೋಸಂಬರಿ, ಬದನೆಕಾಯಿ ಇಲ್ಲವೇ ಹೀರೇಕಾಯಿ ಪಲ್ಯ ಅನ್ನ ತುಪ್ಪ ಸಾರು ಹೀಗೆ ಹಲವಾರು ಭಕ್ಷಗಳ ನೈವೇದ್ಯವನ್ನು ಅರ್ಪಿಸುತ್ತಾರೆ. ಜೀವನ ಚೆನ್ನಾಗಿ ಸುಖಮಯವಾಗಿ ಸಮೃದ್ಧಿಯಿಂದ ಸಾಗಲಿ ಎಂದು ತಾಯಿಯಲ್ಲಿ ಬೇಡಿಕೊಂಡು, ಮಹಾ ಮಂಗಳಾರತಿ ಮಾಡಿ, ಕಾಯಿ ಒಡೆದು ನೈವೇದ್ಯ ಮಾಡುತ್ತಾರೆ. ನಂತರ ತಮ್ಮ ನೆಂಟರಿಷ್ಟರೊಂದಿಗೆ ಹಬ್ಬದ ಊಟ ಸವಿಯುತ್ತಾರೆ. ಆದರೆ ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿಗಳಲ್ಲಿ ಲಕ್ಷ್ಮಿ ಪೂಜೆಯನ್ನು ರಾತ್ರಿಯ ಸಮಯದಲ್ಲಿ ಮಾಡುತ್ತಾರೆ. ಇಡೀ ಊರು ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕೃತವಾಗಿ, ಮಣ್ಣಿನ ಹಣತೆಯ ಸಾಲಾಗಿಟ್ಟ ದೀಪಗಳ ಜಗಮಗಿಸುವ ಕಾಂತಿ ಮೈಮನಗಳನ್ನು ಪುಳಕಿತಗೊಳಿಸುತ್ತದೆ. ಪ್ರತಿ ಅಂಗಡಿಯಲ್ಲಿಯೂ ಪೂಜೆಯ ನಂತರ ಮಂಡಕ್ಕಿ ಡಾಣಿ ಕೊಬ್ಬರಿಯ ಚೂರು ಮತ್ತು ಸಿಹಿಯನ್ನು ಹಂಚುತ್ತಾರೆ. ಮನೆಗಳಲ್ಲಿ ಪೂಜೆ ಮುಗಿಸಿದ ಜನ ತಮಗೆ ಆಹ್ವಾನವಿತ್ತ ಅಂಗಡಿ, ಮುಂಗಟ್ಟುಗಳ ಸ್ನೇಹಿತರ ಮನೆಗಳಿಗೆ ಭೇಟಿ ನೀಡಿ ದೇವರಿಗೆ ನಮಸ್ಕರಿಸಿ ತಾಂಬೂಲ ಪಡೆಯುತ್ತಾರೆ. ಇನ್ನು ಕೆಲವರು ತಮ್ಮ ಮನೆಯ ಎಲ್ಲಾ ವಾಹನಗಳನ್ನು ಸಾಲಾಗಿ ನಿಲ್ಲಿಸಿ ಪೂಜೆ ಸಲ್ಲಿಸುತ್ತಾರೆ. ಮನೆಗಳು ಅಂಗಡಿಗಳು ಸರ್ವಾಲಂಕೃತವಾಗಿ ಸಜ್ಜಾಗಿರುತ್ತವಷ್ಟೇ. ಪೂಜೆಯ ನಂತರ ಪಟಾಕಿ ಹೊಡೆದು ಸಂಭ್ರಮಿಸುತ್ತಾರೆ

ಈ ದಿನವೇ ನರಕಾಸುರನ ಸಂಹಾರವಾದ ದಿನ. ನರಕಾಸುರನ ಸಂಹಾರ ಮಾಡಿದ ಜ್ಞಾಪಕಾರ್ಥವಾಗಿ ಮನೆಯ ಸುತ್ತಲೂ,ದೀಪಗಳನ್ನು ಹೊತ್ತಿಸಿಟ್ಟು ಪಟಾಕಿ ಹಚ್ಚಿ ಬಗೆ ಬಗೆಯ ಹೂಬಾಣಗಳನ್ನು ಬಿಟ್ಟು ರಂಗುರಂಗಿನ ದೀಪಾವಳಿಯನ್ನು ಆಚರಿಸುತ್ತಾರೆ.

ನಾಲ್ಕನೆಯ ದಿನವೇ ಪಾಡ್ಯ. ಇದನ್ನು ಬಲಿಪಾಡ್ಯಮಿ ಎಂದು ಕೂಡ ಕರೆಯುತ್ತಾರೆ. ಪುರಾಣ ಕಥೆಗಳ ಪ್ರಕಾರ ಈ ದಿನ ದಾನಕ್ಕೆ ಹೆಸರಾದ ಆದರೆ ದುಷ್ಟ ರಾಕ್ಷಸನಾದ ಬಲಿಚಕ್ರವರ್ತಿಯನ್ನು ಮಹಾವಿಷ್ಣುವು ವಾಮನನ ಅವತಾರದಲ್ಲಿ ಬಂದು ಆತನಿಂದ ಮೂರು ಅಡಿ ಭೂಮಿಯನ್ನು ದಾನವಾಗಿ ಕೇಳಿದ. ಯಾರು ಕೇಳಿದರೂ, ಯಾವಾಗ ಕೇಳಿದರೂ ಇಲ್ಲ ಎಂದು ಹೇಳದ ಬಲಿಚಕ್ರವರ್ತಿಯು ಪುಟ್ಟ ವಾಮನ ರೂಪಿಗೆ ತನ್ನ ಕಾಲಳತೆಯಿಂದ ಮೂರು ಅಂಗುಲ ಭೂಮಿಯನ್ನು ಅಳೆದುಕೊಳ್ಳಲು ಹೇಳಿದ. ಅದರಂತೆ ತನ್ನ ಮೊದಲ ಹೆಜ್ಜೆಯನ್ನು ವಾಮನ ಭೂಮಿಯ ಮೇಲೆ ಇಟ್ಟಾಗ ಇಡೀ ಭೂಮಂಡಲವೇ ಆತನ ಪಾದದಡಿಯಲ್ಲಾಯಿತು. ವಾಮನ ಎರಡನೇ ಹೆಜ್ಜೆಯನ್ನು ಆಕಾಶದತ್ತ ಇಡಲು ಸೂಚಿಸಿದ ಬಲಿಚಕ್ರವರ್ತಿ, ವಾಮನರೂಪಿ ವಿಷ್ಣು ಆಕಾಶದೆಡೆಗೆ ಕಾಲು ಚಾಚಲು ಇಡಿ ಆಕಾಶವೇ ಆತನ ಪಾದದಡಿಯಲ್ಲಾಯಿತು. ಆಗ ವಾಮನನು ತನ್ನ ಮೂರನೇ ಪಾದವನ್ನು ಎಲ್ಲಿಡಲಿ ಎಂದು ಕೇಳಿದಾಗ ಮಾತಿಗೆ ತಪ್ಪದ ಬಲಿಚಕ್ರವರ್ತಿಯು ವಾಮನನಿಗೆ ನಿನ್ನ ಮೂರನೇ ಪಾದವನ್ನು ನನ್ನ ತಲೆಯ ಮೇಲೆ ಇಡು ಎಂದು ಹೇಳಿದ. ವಾಮನ ಅವತಾರಿಯು ತನ್ನ ಮೂರನೇ ಪಾದವನ್ನು ಬಲಿಚಕ್ರವರ್ತಿಯ ತಲೆಯ ಮೇಲೆ ಇಟ್ಟು ಜೋರಾಗಿ ತುಳಿಯಲು ಬಲಿಯು ಪಾತಾಳದಲ್ಲಿ ತಳ್ಳಲ್ಪಟ್ಟನು. ಎಷ್ಟೇ ದೊಡ್ಡ ದಾನಿಯಾದರೂ ತನ್ನ ದುಷ್ಕೃತ್ಯಗಳಿಂದ ಪಾಪಾತ್ಮನಾಗಿದ್ದ ಬಲಿ ಚಕ್ರವರ್ತಿಯ ದಮನವು ವಿಷ್ಣುವಿನ ಅವತಾರವಾದ ವಾಮನನಿಂದ ಆದ ಶುಭ ದಿನವನ್ನು, ಜೊತೆಗೆ ಬಲಿಯ ದಾನ ಗುಣವನ್ನು ನೆನೆಸುವ ಸಲುವಾಗಿ ಈ ದಿನವನ್ನು ಬಲಿಪಾಡ್ಯಮಿ ಎಂದು ಆಚರಿಸುತ್ತಾರೆ.

ಈ ದಿನ ಪಾಂಡವರು ಇಂದ್ರಪ್ರಸ್ಥ ರಾಜ್ಯಕ್ಕೆ ಮರಳಿದ ದಿನ. ಈ ದಿನದಂದು ಮನೆ ಮನೆಗಳ ಮುಂದೆ ಸಗಣಿಯನ್ನು ಸಾರಿಸಿ ರಂಗವಲ್ಲಿಯನ್ನು ಇಟ್ಟು ರಂಗವಲ್ಲಿಯ ಮಧ್ಯಭಾಗದಲ್ಲಿ ಪಾಂಡವರನ್ನು ಕೂರಿಸುತ್ತಾರೆ. ಮನೆಮನೆಯ ದೇವರ ಜಗಲಿಗಳಲ್ಲಿ, ಒರಳು ಕಲ್ಲಿನ ಬಳಿ, ಬೀಸುವ ಕಲ್ಲಿನ ಬಳಿ, ಅಡುಗೆ ಒಲೆಯ ಬಳಿ, ಮನೆಯ ಹಿತ್ತಲ ಬಾಗಿಲ ಬಳಿ ಮನೆಯ ಮುಂಬಾಗಿಲ ಎರಡು ಬದಿಗಳಲ್ಲಿ ಸಗಣಿಯಿಂದ ತಯಾರಿಸಿದ ಪಾಂಡವರ ಮೂರ್ತಿಗಳು ಅವುಗಳನ್ನು ಉತ್ತರಾಣಿ ಕಡ್ಡಿ, ಕೊಲ್ಹಾಣಿಯಿಂದ, ಹಳದಿ ಹೊನ್ನಂಬರಿಕೆ ಹೂಗಳಿಂದ ಸಿಂಗರಿಸಿರುತ್ತಾರೆ. ನಮ್ಮ ಗ್ರಾಮೀಣ ಭಾಗದಲ್ಲಿ ಇನ್ನೂ ಒಂದು ಪೂಜೆಯ ವಿಶೇಷತೆ ಇದೆ. ಮನೆಮನೆಗಳಲ್ಲಿ ದನದ ಹಕ್ಕಿ(ಗ್ರಾಮ್ಯ ಭಾಷೆಯಲ್ಲಿ ದಂದಕ್ಕಿ) ಇರುತ್ತದೆಯಲ್ಲವೇ... ಆ ಹಕ್ಕಿಯಲ್ಲಿನ ದನಗಳನ್ನು ಮೇಯಲು ಹೊರಗಟ್ಟಿ, ನಂತರ ದಂದಕ್ಕಿಯನ್ನು ಚೊಕ್ಕಟವಾಗಿ ಗುಡಿಸಿ ಸಾರಿಸಿ ಕಾಗದದ ಸುರುಳಿಗಳಿಂದ ಕೋಟೆಯನ್ನು ಕಟ್ಟಿ ಅಲ್ಲಿ ಹಟ್ಟೆವ್ವನನ್ನು ಸ್ಥಾಪಿಸುತ್ತಾರೆ. ಜೋಳದ ಗರಿಗಳ ಶೃಂಗಾರ ಮಂಟಪವನ್ನು ಮಾಡಿ, ಅದರಲ್ಲಿ ಬನ್ನಿಕಟ್ಟಿಗೆಯ ಕಂಬವನ್ನು ಮಧ್ಯದಲ್ಲಿ ಇಟ್ಟು ಹಾಲು ತುಪ್ಪವನ್ನು ಹಾಕಿ ಹಟ್ಟೆವ್ವನನ್ನು, ಪಾಂಡವರನ್ನು ಸ್ಥಾಪಿಸಿ, ಸೈನಿಕರನ್ನು ದ್ವಾರಪಾಲಕರನ್ನು ಪ್ರತಿಷ್ಠಾಪಿಸಿ ನಿತ್ಯಪೂಜ ವಿಧಿಗಳಂತೆ ಪೂಜಿಸಿ, ಚಂಡು ಹೂವು ಸೇವಂತಿಗೆ ವಿಶೇಷವಾಗಿ ಹೊನ್ನಂಬರಿಕೆ ಕೊಲ್ಹಾಣಿ ಗಳಿಂದ ಅಲಂಕರಿಸುತ್ತಾರೆ.,,,( ಈ ಹೊನ್ನಂಬರಿಕೆ ಹೂವಿನಲ್ಲಿಯೂ ಒಂದು ವಿಶೇಷತೆ ಇದೆ. ಹೊನಂಬರಿಕೆ ಹೂವಿನ ಒಳಭಾಗದಲ್ಲಿರುವ ಹೂವಿನ ಮೊಗ್ಗನ್ನು ಬಿಡಿಸಿದರೆ ಅದು ಐದು ದಳಗಳನ್ನು ಹೊಂದಿದ್ದು ಅದು ಪಂಚಪಾಂಡವರನ್ನು ಸೂಚಿಸುತ್ತದೆ.) ಸುತ್ತಲೂ ದೀಪಗಳನ್ನು ಹಚ್ಚಿಡುತ್ತಾರೆ. ಈ ಬನ್ನಿ ಕಂಬವನ್ನು ಮುಂದೆ ರಾಶಿ ಮಾಡುವಾಗ ಕಣದಲ್ಲಿ ಮರು ಪ್ರತಿಷ್ಠಾಪಿಸುತ್ತಾರೆ. ತುಸು ಕತ್ತಲಿರುವ ಈ ಭಾಗದಲ್ಲಿ ಹಗಲು ಹೊತ್ತಿನಲ್ಲಿಯೇ ರಂಗವಲ್ಲಿಯ ಮೇಲೆ ಹಚ್ಚಿಟ್ಟ ದೀಪಗಳು ಕಣ್ಣಿಗೆ ನೀಡುವ ಆನಂದವನ್ನು, ಮನಸ್ಸಿಗೆ ನೀಡುವ ಮುದವನ್ನು ವರ್ಣಿಸಲು ಅಸಾಧ್ಯ. ಅನುಭವಿಸಿಯೇ ತಿಳಿಯಬೇಕು. ಪಾಂಡವರನ್ನು ಮನೆಗೆ ಆಹ್ವಾನಿಸುವ ಕುರುಹಾಗಿ ಎರಡೂ ಕೈಗಳ ಮುಷ್ಟಿಯನ್ನು ಮಾಡಿ ಸುಣ್ಣ ಇಲ್ಲವೇ ಕೆಮ್ಮಣ್ಣಿನಲ್ಲಿ ಅದ್ದಿ ಮಾಡಿದ ಹೆಜ್ಜೆಗಳನ್ನು ಮನೆಯ ತಲಬಾಗಿಲಿನಿಂದ ದೇವರ ಮನೆಯವರಿಗೂ ಇಲ್ಲವೇ ದಂದಕ್ಕಿಯವರೆಗೂ ಬಿಡಿಸುತ್ತಾರೆ. ಹಲವಾರು ವಿಧದ ಭಕ್ಷ್ಯಗಳನ್ನು ಮಾಡಿ ದೇವರಿಗೆ ನೈವೇದ್ಯ ಮಾಡುತ್ತಾರೆ. ಮಧ್ಯಾಹ್ನದ ಹೊತ್ತಿಗೆ ಈ ಹಟ್ಟೆವ್ವನನ್ನು ಪೂಜಾ ವಿಧಿಗಳ ಮೂಲಕ ವಿಸರ್ಜಿಸಿ ಮನೆಯ ಮೇಲೆ ಇಲ್ಲವೇ ಗೋಡೆಗಳ ಮೇಲೆ ಇಟ್ಟು ಬಿಡುತ್ತಾರೆ.

ಪಾಡ್ಯದ ಈ ದಿನದಂದು ಮುಂಜಾನೆಯೇ ಮನೆಯ ಎಲ್ಲರೂ ಎಣ್ಣೆ(ಎಣ್ಣೆ ಮಜ್ಜನ)ಮತ್ತು ಬಿಸಿ ನೀರಿನ ಅಭ್ಯಂಗ ಸ್ನಾನ ಮಾಡುತ್ತಾರೆ. ಮನೆಯ ಎಲ್ಲಾ ಪುರುಷ ಸದಸ್ಯರಿಗೂ ಮನೆಯ ಪುಟ್ಟ ಹೆಣ್ಣುಮಕ್ಕಳಿಂದ ಹಿರಿಯ ಹೆಂಗಸರವರೆಗೂ ಸೇರಿ ತಿಲಕವಿಟ್ಟು ಕಂಕಣ ಕಟ್ಟಿ ಅಕ್ಷತೆ ಹಾಕಿ ಆರತಿ ಮಾಡಿ ಹಾರೈಸುತ್ತಾರೆ. ಹೀಗೆ ಹಾರೈಸುವ ಹೆಣ್ಣು ಮಕ್ಕಳಿಗೆ ಆರತಿಯ ತಟ್ಟೆಯಲ್ಲಿ ತಮ್ಮ ಶಕ್ತ್ಯಾನುಸಾರ ಹಣ, ಚಿನ್ನ, ಬಟ್ಟೆಗಳ ಉಡುಗೊರೆ ದೊರೆಯುತ್ತದೆ. ಶಾವಿಗೆ ಪಾಯಸ ಈ ದಿನದ ಮುಖ್ಯ ಆಹಾರ. ಶಾವಿಗೆ ಸಂಘಟನೆಯ ಪ್ರಾಮುಖ್ಯತೆಯನ್ನು ಸಾರುವ ಆಹಾರ. ಶಾವಿಗೆಯಂತೆ ನಾವೆಲ್ಲರೂ ಕೌಟುಂಬಿಕವಾಗಿ ತಳುಕು ಹಾಕಿಕೊಂಡಿರಬೇಕು ಎಂಬ ಸಂದೇಶವನ್ನು ಆಹಾರದ ಮೂಲಕ ನಾವು ಪಡೆಯುತ್ತೇವೆ.

ಹೊಸದಾಗಿ ಮದುವೆಯಾದ ನವ ದಂಪತಿಗಳಿಗೆ ಹೆಣ್ಣಿನ ತವರು ಮನೆಯಲ್ಲಿ ಮೊದಲ ದೀಪಾವಳಿಯ ಹಬ್ಬ ವಿಶೇಷವಾದದ್ದು. ಮೊದಲ ದೀಪಾವಳಿ ಹಬ್ಬಕ್ಕೆ ಬಂದ ಅಳಿಯ ಮನೆಯ ಎಲ್ಲರಿಗೂ ಉಡುಗೊರೆಗಳನ್ನು ತಂದುಕೊಟ್ಟರೆ ಮಗಳು,ಅಳಿಯನಿಗೆ ಚಿನ್ನದ ಒಡವೆ, ಬಟ್ಟೆ ನೀಡಿ ಸತ್ಕರಿಸಲಾಗುತ್ತದೆ. ಉಳ್ಳವರಿಗೇನೋ ಸರಿಯೇ ಆದರೆ ಆರ್ಥಿಕವಾಗಿ ತೊಂದರೆಯಲ್ಲಿರುವ ಬಹುತೇಕ ಜನರಿಗೆ ದೀಪಾವಳಿ ಹಬ್ಬ ದಿವಾಳಿಯನ್ನಾಗಿಸುವ ಹಬ್ಬವಾಗುತ್ತದೆ. ಮಕ್ಕಳ ಚೆಲ್ಲಾಟ, ಹೊಸ ಮದು ಮಕ್ಕಳ ಹುಡುಗಾಟ, ಮಾವನ ಮನೆಯ ಎಲ್ಲಾ ಹಿರಿಕಿರಿಯರ ಕಾಡಿಸುವಾಟ ಹೀಗೆ ದೀಪಾವಳಿ ಹಚ್ಚ ಹಸಿರಾಗಿ ಮನದಲ್ಲಿ ನಿಲ್ಲುತ್ತದೆ.

ಮುಖ್ಯವಾಗಿ ದೀಪಾವಳಿ ಹಬ್ಬದ ಉದ್ದೇಶ ಸತ್ಯಮೇವ ಜಯತೆ ಎಂಬ ಸಂದೇಶವನ್ನು ನೀಡುವುದು.ಸತ್ಯವು ಯಾವಾಗಲೂ ಗೆಲ್ಲುತ್ತದೆ ಎಂದು ಸಾರುವ ಎಲ್ಲ ಪೌರಾಣಿಕ, ಐತಿಹಾಸಿಕ ಘಟನೆಗಳನ್ನು ನೆನಪಿಸಿಕೊಂಡು, ಮನುಷ್ಯ ದೈಹಿಕವಾಗಿ ಸಾಮಾಜಿಕವಾಗಿ ಭಾವನಾತ್ಮಕವಾಗಿ ಎಷ್ಟೇ ಜರ್ಜರಿತನಾಗಿದ್ದರು ತನಗೂ ಒಂದು ಒಳ್ಳೆಯ ದಿನ ಬಂದೇ ಬರುತ್ತದೆ ಎಂದು ಆಶಿಸುವ,ಭರವಸೆ ಮತ್ತು ವಿಶ್ವಾಸ ಹುಟ್ಟಿಸುವ, ಸಂಬಂಧಗಳಲ್ಲಿ ಆತ್ಮೀಯತೆಯನ್ನು ಹೆಚ್ಚಿಸುವ ಹಬ್ಬ ದೀಪಾವಳಿ.

**"ಶುಭಂ ಕರೋತಿ ಕಲ್ಯಾಣಂ
ಆರೋಗ್ಯಂ ಧನ ಸಂಪದಂ
ಶತ್ರುಬುದ್ಧಿ ವಿನಾಶಾಯಚ
ದೀಪ ಜ್ಯೋತಿ ನಮೋಸ್ತುತೆ"**

# ಬಿ.ವೈ.ವಿಜಯೇಂದ್ರಗೆ ರಾಜ್ಯ ಬಿಜೆಪಿ ಸಾರಥಿ ಪಟ್ಟ, ಹೆಚ್ಚಿದ ಸಂಭ್ರಮ

**ಹಂಪಿ ಟೈಮ್ಸ್ ಕೂಡ್ಲಿಗಿ :**
ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾರತೀಯ ಜನತಾ ಪಾರ್ಟಿಯ ಜಿಲ್ಲಾಧ್ಯಕ್ಷರಾದ ಚನ್ನಬಸನಗೌಡ, ಪಾಟೀಲ್,ಜಿ. ಇವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಕರ್ನಾಟಕ ರಾಜ್ಯ ಘಟಕದ ರಾಜ್ಯಾಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾದ ಬಿ.ವೈ ವಿಜಯೇಂದ್ರರವರು ಆಯ್ಕೆಯಾಗಿರುವುದಕ್ಕೆ ಕೂಡ್ಲಿಗಿ ಬಿಜೆಪಿ ಮಂಡಲ ವತಿಯಿಂದ ಎಲ್ಲಾ ಪದಾಧಿಕಾರಿಗಳು ಹಾಗೂ ಯುವ ಮೋರ್ಚಾ ಕಾರ್ಯಕರ್ತರು ಅಭಿನಂದನೆಗಳು ಸಲ್ಲಿಸಿ ಸಂಭ್ರಮಿಸಿ ಸಿಹಿ ಹಂಚಿದರು.

ಈ ಸಂದರ್ಭದಲ್ಲಿ , ಬಿಜೆಪಿ ಜಿಲ್ಲಾ ಅಧ್ಯಕ್ಷ ಚೆನ್ನಬಸವನ ಗೌಡ್ರು ಮಾತನಾಡಿ, ಯುವ ಉತ್ಸಾಹಿ ರಾಜ್ಯ ಅಧ್ಯಕ್ಷರಾಗಿರುವುದು ತುಂಬಾ ಸಂತೋಷಕರವಾಗಿದೆ. ಲೋಕಸಭೆ ಚುನಾವಣೆ ಪಕ್ಷ ಮತ್ತಷ್ಟು ಹೆಚ್ಚು ಸಂಘಟನೆ ಹಾಗೂ ಕಾರ್ಯಕರ್ತರು ಬಲಿಷ್ಠ ರೀತಿ ಯಲ್ಲಿ ಕೆಲ್ಸ



ಮಾಡಲು ರಾಜ್ಯ ಅಧ್ಯಕ್ಷರು ಹೆಚ್ಚಿನ ಆಸಕ್ತಿ ವಹಿಸುತ್ತಾರೆ. ದೇಶದ ಸುಭದ್ರತೆಗಾಗಿ ಮತ್ತೊಮ್ಮೆ ಶ್ರೀ ನರೇಂದ್ರ ಮೋದಿ ಅವರನ್ನು ಪ್ರಧಾನಿಯಾಗಿ ಮಾಡಲೂ ಎಲ್ಲರೂ ಸಂಕಲ್ಪ ಮಾಡೋಣ ಪಕ್ಷ ಸಂಘಟನೆಗಾಗಿ ಶ್ರಮವಹಿಸೋಣ ಎಂದು ಕರೆ ನೀಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೂರ್ಯ ಪಾಪಣ್ಣ, ಜಿಲ್ಲಾ ಎಸ್ ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭೀಮೇಶ್, ಜಿಲ್ಲಾ ಎಸ್ ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ದುರಗೇಶ್, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಸುನಿಲ್ ಗೌಡ್ರು ಮಂಡಲದ ಎಸ್ ಟಿ ಮೋರ್ಚಾ ಅಧ್ಯಕ್ಷ ಚಂದ್ರು, ಕೂಡ್ಲಿಗಿ ಮಂಡಲದ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಮತ್ತು ಶರಣಗೌಡ್ರು ಯುವ ಮೋರ್ಚಾ ಅಧ್ಯಕ್ಷರಾದ ಗುಳಿಗಿ ವೀರೇಶ್, ಮಹಿಳಾ ಮೋರ್ಚಾ ಅಧ್ಯಕ್ಷರಾದ ಎಲ್, ಪವಿತ್ರ, ನಗರದ ಘಟಕದ ಅಧ್ಯಕ್ಷ ವಾಗೀಶ್, ಗುನ್ನಳ್ಳಿ ನಾರಾಯಣ ಅಜೇಯ ರಮೇಶ ಕಿಟ್ಟಿ ಮತ್ತು ಬಿಜೆಪಿ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕವಿ ಮನಸು**

## ನಾನು ದೀಪ ಹಚ್ಚುತ್ತೇನೆ

ಅಸತ್ಯದ ಮನಗಳ ದಹಿಸಿ
ಸತ್ಯದ ಎದೆಗಳು ಚಿಗುರುವಂತೆ ಮಾಡಲು
ನಾನು ದೀಪ ಹಚ್ಚುತ್ತೇನೆ !!
ದರ್ಪದ ನಡೆಗಳ ಕೊನೆಗಾಣಿಸಿ
ಸರ್ವರಲೂ ಪ್ರೀತಿಯ ಬಂಧವ
ಬೆಳೆಸಲು
ನಾನು ದೀಪ ಹಚ್ಚುತ್ತೇನೆ !!
ಅಧಿಕಾರದ ಕತ್ತಲು ತೊಲಗಿಸಿ
ಪ್ರಜಾಪ್ರಭುತ್ವದ ಮೌಲ್ಯವ ಉಳಿಸಲು
ನಾನು ದೀಪ ಹಚ್ಚುತ್ತೇನೆ !!
ಜಾತಿಗಣತಿಯ ಹೆಸರಲಿ ಸಮಾಜವ
ತುಂಡಾಗಿಸದೇ ;
ಇಲ್ಲದವರ ಗುರುತಿಸಿ ಅವರ ಬದುಕು
ಹಸನಾಗಿಸಲು
ನಾನು ದೀಪ ಹಚ್ಚುತ್ತೇನೆ !!
ಧರ್ಮದ ನಶೆಯಲಿ ಜನಸಾಮಾನ್ಯರ
ಸಿಲುಕಿಸದೇ;
ಭಾವೈಕ್ಯತೆಯ ದೀಪಗಳ ಎಲ್ಲರ ಮನೆಯಲೂ
ಬೆಳಗಿಸಲು
ನಾನು ದೀಪ ಹಚ್ಚುತ್ತೇನೆ !!
ಕೋಮುವಾದದ ಫಿರಂಗಿಯ ಹಾರಿಸದೇ
ಸಮಾನತೆಯ ಅನುಬಂಧವ ಮೂಡಿಸಲು
ನಾನು ದೀಪ ಹಚ್ಚುತ್ತೇನೆ !!
ಭ್ರಷ್ಟಚಾರದ ಕೈಗಳ ಶಕ್ತಿಹೀನವಾಗಿಸಿ, ಶಿಕ್ಷಿಸಿ
ಸ್ವಚ್ಛ ಆಡಳಿತ ನಡೆಸೋ ಕರಗಳಿಗೆ
ಶಕ್ತಿ ನೀಡಬೇಕೆಂದು
ನಾನು ದೀಪ ಹಚ್ಚುತ್ತೇನೆ !!
ತಾಯ್ನೆಲದ ಅನ್ನವನುಂಡು ದ್ರೋಹ
ಬಗೆಯುವ ದೃಷ್ಟ ಮೃಗಗಳಿಗೆ
ಕಾನೂನಿನ ಕುಣಿಕೆಗಳು ಬಿಗಿಯಾಗಿ
ಉಸಿರುಗಟ್ಟಿಸಲು
ನಾನು ದೀಪ ಹಚ್ಚುತ್ತೇನೆ !!
ಅನ್ನದಾತರ ಬದುಕು ಹಸನಾಗಲು
ಮೇಘನು ಕೃಪೆ ತೋರಿ
ಧರೆಗೆ ಹನಿಯಾಗಿ ಸುರಿಯುವಂತೆ ಪ್ರಾರ್ಥಿಸಿ
ನಾನು ದೀಪ ಹಚ್ಚುತ್ತೇನೆ !!

। ಕಾಡಜ್ಜಿ ಮಂಜುನಾಥ







**ತುಂಗಭದ್ರಾ ನೀರಿನ ಮಟ್ಟ**



| ಭಾನುವಾರ : 12-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.80 ಅಡಿ |
| ಒಳ ಹರಿವು | 7714 ಕ್ಯುಸೆಕ್ |
| ಹೊರ ಹರಿವು | 8067 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.359 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.66 ಅಡಿ |
| ಒಳ ಹರಿವು | 3956 ಕ್ಯುಸೆಕ್ |
| ಹೊರ ಹರಿವು | 9535 ಕ್ಯುಸೆಕ್ |
| ಸಾಮರ್ಥ್ಯ | 100.445 ಟಿಎಂಸಿ |

# ಸಾಮಾಜಿಕ ಆರೋಗ್ಯದ ಮೂಲಮಂತ್ರ !

## ಸರ್ವೇ ಜನ ಸುಖಿನೋ ಭವಂತು

"ಬೇಕು,ಅವಶ್ಯಕತೆ ಮತ್ತು ಅನಿವಾರ್ಯತೆಯ ಅರ್ಥವನ್ನು ತಿಳಿದುಕೊಂಡರೆ ನೀವು ಅರ್ಧ ಜೀವನ ಗೆದ್ದ ಹಾಗೆ, ಒಂದು ವೇಳೆ ನಿಮ್ಮ ಮಕ್ಕಳಿಗೆ ಇದರ ಮನವರಕೆ ಮಾಡಿಕೊಟ್ಟರೆ ಪರಿಪೂರ್ಣವಾಗಿ ಪೂರ್ತಿ ಜೀವನ ಗೆದ್ದಹಾಗೆ!"

ಪ್ರಿಯ ಪಾಲಕರೆ ನಾವು ಬಾಲ್ಯದಿಂದಲೂ ಕೇಳಿಕೊಂಡುಬಂದಿರುವ ಮತ್ತು ಪಠ್ಯ ಪುಸ್ತಕಗಳಲ್ಲಿ ಓದಿಕೊಡು ಬಂದಿರುವ ಒಂದು ವಾಕ್ಯ- "ಮಾನವ ಸಂಘಜೀವಿ" ಅವನು ಏಕಾಂಗಿಯಾಗಿ ಬದಕಲು ಸಾಧ್ಯವಿಲ್ಲ ಬದುಕಿದರು ಸ್ವಲ್ಪವೇ ಸ್ವಲ್ಪ ದಿನ ಬದಕಲು ಸಾಧ್ಯ ಎಂದು ಅಲ್ಲವೆ? ನಾವೆಲ್ಲರೂ ನಮ್ಮ ಬದುಕಿನಲ್ಲಿ ಬರುವ ಪ್ರತಿಯೊಬ್ಬರೂ ಇರುವುದು ಈ ಸಮಾಜದ ನಡುವಿನಲ್ಲಿಯೇ. ಎಲ್ಲರಿಂದ ದೂರವಿದ್ದು ಜೀವನ ಅನುಭವಿಸಿದರೂ ನಂತರ ನಾವೆಲ್ಲರು ಬಯಸುವುದು ಒಂದೇ "ಇದ್ದರೆ ಸಮಾಜದ ಮಧ್ಯೆಯೇ ಬದುಕು ಕಟ್ಟಿಕೊಳ್ಳುವ, ಸತ್ತರೂ ಸಹ ಸಮಾಜದ ಮಧ್ಯೆಯೇ ಸಾಯಬೇಕು ಎನ್ನುವ ಆಸೆಯನ್ನು ಅಲ್ಲವೆ? ಹಾಗಾಗಿ ನಮ್ಮ ಮಕ್ಕಳು ಸಹ ನಮ್ಮ ಮಧ್ಯಯೇ ಬದಕಬೇಕಲ್ಲವೇ? ಅಂದರೆ ಅವರೂ ಸಹ ಸಮಾಜದ ಸಂಘಜೀವಿಯಲ್ಲಿನ ಒಂದು ಕೊಂಡಿ ಅಲ್ಲವೇ? ಹಾಗಾಗಿ ಜವಾಬ್ದಾರಿಯುತ ಪಾಲಕರಾದ ನಾವು ನಮ್ಮ ಮಕ್ಕಳನ್ನು ನಮ್ಮ ಸಮಾಜಕ್ಕೆ ಒಂದು ಕೊಡುಗೆಯಾಗಿ ನೀಡಬೇಕಲ್ಲವೇ? ಹಾಗಿದ್ದ ಮೇಲೆ ನಮ್ಮ ಮಕ್ಕಳ ಸಾಮಾಜಿಕ ಆರೋಗ್ಯ-ಸಾಂಘಿಕ ಶುಚಿತ್ವ ಹೇಗಿರಬೇಕು? ಈ ಸಾಮಾಜಿಕ ಆರೋಗ್ಯ-ಸಾಂಘಿಕ ಶುಚಿತ್ವ ಎಂದರೆ ಏನು? ಎಂಬುದನ್ನು ನಾವು ತಿಳಿಯೋಣ.

ಕೇವಲ ನಾವು ಮಕ್ಕಳನ್ನು ಹೆತ್ತು, ಹೊತ್ತು, ಸಾಕಿ, ಸಲಹಿದ ಮಾತ್ರಕ್ಕೆ ನಾವು ಉತ್ತಮ ಪಾಲಕರಾಗಲು ಸಾಧ್ಯವಿಲ್ಲ ಮತ್ತು ಅದು ಸಾದುವು ಅಲ್ಲ, ಏಕೆಂದರೆ ಸಮಾಜಕ್ಕೆ ಮಕ್ಕಳನ್ನು ನೀಡುವುದು ಮಾತ್ರ ಪಾಲಕರ ಕೆಲಸವಾಗಿದ್ದರೆ ನಮಗೂ ಮತ್ತು ಮಕ್ಕಳನ್ನು ಮಾಡುತ್ತಿರುವ ಇತರ ಪ್ರಾಣಗಳಿಗೂ ಯಾವುದೇ ವ್ಯತ್ಯಾಸ ಕಂಡುಬರುತ್ತಿರಲಿಲ್ಲ ಆದರೆ ಮನುಷ್ಯರಾದ ನಾವು ನಮ್ಮ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಹಾಗೂ ಜ್ಞಾನವನ್ನು ಬೆಳೆಸುವ ಮೂಲಕ ನಮ್ಮ ಸಮಾಜಕ್ಕೆ ಮಾದರಿಯಾಗುವಂತಹ ಮತ್ತು ನಮ್ಮ ಸಮಾಜ ಮೆಚ್ಚುವಂತಹ ಮಕ್ಕಳನ್ನು ನೀಡಬೇಕಾಗಿದೆ. ಅವರು ಮುಂದೆ ನಮ್ಮ ಸಮಾಜದ ಉತ್ತಮ ಪ್ರಜೆಯಾಗಿ ಬೆಳೆಯಬೇಕಲ್ಲವೇ? ಅವನು/ಳು ತನ್ನಷ್ಟಕ್ಕೆ, ತನ್ನ ಕುಟುಂಬಕ್ಕೆ, ತನ್ನ ಊರಿಗೆ ಅವನ ಸಮುದಾಯಕ್ಕೆ ಹಾಗು ನಮ್ಮ ಸಮಾಜಕ್ಕೆ ಬೇಕಾಗಬೇಕಲ್ಲವೆ? ಹಾಗೆ ಮಕ್ಕಳನ್ನು ಸಮಾಜಮುಖಿಯಾಗಿ, ಶುಚಿಯಾಗಿ, ಸ್ವಸ್ಥವಾಗಿ ಬೇಳಸಬೇಕಾಗಿರುವುದು ಪಾಲಕರ ಪ್ರಮುಖ ಜವಾಬ್ದಾರಿ ಎಂಬುದನ್ನು ಮರೆಯಬಾರದು. ಪ್ರತಿಯೊಬ್ಬ ಪಾಲಕರೂ ಇದನ್ನು ಅರಿತು ತಮ್ಮ ತಮ್ಮ ಮಕ್ಕಳನ್ನು ಭವಿಷ್ಯದಲ್ಲಿ ಸಮಾಜಕ್ಕೆ ಬೇಕಾದ "ಸಾಮಾಜಿಕ ಆರೋಗ್ಯ-ಸಾಂಘಿಕ ಶುಚಿತ್ವ" ದ ಬೆಳಕಾಗಿ ಬೇಳೆಸಿದರೆ ಮಾತ್ರವೇ ನಮ್ಮ ಮಕ್ಕಳ ಬದುಕು ಹಾಗೂ ನಮ್ಮ ಸಮಾಜದ ಆರೋಗ್ಯ- ಸಾಂಘಿಕ ಶುಚಿತ್ವವನ್ನು ಹೊಂದಬಹುದಾಗಿದೆ.

ಏಕೆಂದರೆ ಒಂದು ಸಮಾಜ ಅಂದಮೇಲೆ ಧನಾತ್ಮಕ ಅಂಶಗಳು ಮತ್ತು ಋಣಾತ್ಮಕ ಅಂಶಗಳೆರಡೂ ಇರುವುದು ಸಹಜ. ನಮ್ಮ ಮಕ್ಕಳ ವಿಕಾಸವು ಹಾಗು ಅವರ ಬೆಳವಣಿಗಗಳು ಅವರ ಸುತ್ತಲಿನ ಪರಿಸರದಿಂದ(ಸಮಾಜದಿಂದ) ಹೆಚ್ಚು ಹೆಚ್ಚು ಪ್ರಭಾವಿತವಾಗಿರುತ್ತದೆ ಎನ್ನುವ ಅಂಶವನ್ನು ಪಾಲಕರಾದ ನಾವು ನೀವೆಲ್ಲ ಸದಾ ನೆನಪಿನಲ್ಲಿ ಇಡಬೇಕು. ನಮ್ಮ ಮಕ್ಕಳು ಬೆಳೆಯುವಂತಹ ಈ ಪರಿಸರವನ್ನು ಸಂರಕ್ಷಿಸಲು ಹೆಚ್ಚು ಹೆಚ್ಚು ಧನಾತ್ಮಕವಾಗಿ ಇರುವಂತೆ ನೋಡಿಕೊಳ್ಳುವುದು ಸಾಧ್ಯವಾದ ಮಟ್ಟಿಗೆ ಸಮಾಜದಲ್ಲಿನ ನಕಾರಾತ್ಮಕ ಅಂಶಗಳಿಂದ ನಮ್ಮ ಮಕ್ಕಳನ್ನ ದೂರವಿಟ್ಟು ಅವರ ವರ್ತನೆಯಲ್ಲೂ ಸಹ ಯಾವುದೇ ಋಣಾತ್ಮಕ ಅಂಶಗಳು ಸೇರದಂತೆ ಕಾಳಜಿವಹಿಸಿ ಕೇವಲ ಧನಾತ್ಮಕವಾದ ಅಂಶಗಳಾದ ದಯೆ, ಕರುಣೆ, ಪ್ರಾಮಾಣಿಕತೆ, ಧೈರ್ಯ, ಪ್ರೀತಿ, ಪರಿಶ್ರಮ, ಶಿಸ್ತು, ಸಹಕಾರ, ಸಹಾನುಭೂತಿ, ಸಂಯಮ, ಬುದ್ಧಿವಂತಿಕೆ, ಚುರುಕುತನ, ಆತ್ಮ ವಿಶ್ವಾಸ ಮುಂತಾದ ಉತ್ತಮ ಗುಣಗಳನ್ನು ಅಥವಾ ಮೌಲ್ಯಗಳನ್ನು ನಮ್ಮ ಮಕ್ಕಳು ಹೊಂದುವಂತ ಮಾಡುವುದೇ ಈ ಸಾಮಾಜಿಕ ಆರೋಗ್ಯ-ಸಾಂಘಿಕ ಶುಚಿತ್ವ ಎನಿಸಿಕೊಳ್ಳುತ್ತದೆ.

ಈ ಎಲ್ಲ ಅಂಶಗಳು ನಮ್ಮ ಮಕ್ಕಳಲ್ಲಿ ಇರಬೇಕು ಎಂದು ಎಲ್ಲಾ ಪಾಲಕರು ಬಯಸುತ್ತಾರೆ, ಇಂತಹ ಸಮಾಜಿಕ ವರ್ತನೆಗಳಿಂದ ಮಾತ್ರ ನಮ್ಮ ಸಮಾಜದಲ್ಲಿ ಸಕಾರಾತ್ಮಕ ಬೆಳವಣಿಗೆಗಳನ್ನು ಕಾಣಲು ತನ್ಮೂಲಕ ಉತ್ತಮ ಆರೋಗ್ಯದ ಜೀವನ ಹಾಗೂ ಸಂತೋಷದ ಜೀವನವನ್ನು ಪಡೆಯಬಹುದಾಗಿದೆ. ಹಾಗಾದರೆ ನಮ್ಮ ಮಕ್ಕಳು "ಸಾಮಾಜಿಕ ಆರೋಗ್ಯ-ಸಾಂಘಿಕ ಶುಚಿತ್ವ ವನ್ನು ಹೊಂದಲು ಪಾಲಕರಾದ ನಾವು ಏನು ಮಾಡಬಹುದು ಎಂದು ನೋಡುವುದಾದರೆ.

1. ಮೌಲ್ಯ ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡಿ.

ಒಂದು ಕಾಲವಿತ್ತು ಶಾಲೆಯಲ್ಲಿ ಮಕ್ಕಳಿಗೆ ನಿತ್ಯ ಭೋಧನೆಯ ಲೆಕ್ಕ, ವಿಜ್ಞಾನ, ಭೂಗೋಳ, ಸಮಾಜ ಶಾಸ್ತ್ರ, ಭಾಷೆಗಳ ಜೊತೆ ಜೊತೆಗೆ ಕಾರ್ಯಶಿಕ್ಷಣ , ಮೌಲ್ಯ ಶಿಕ್ಷಣ, ದೈಹಿಕ ಶಿಕ್ಷಣ, ಸಾಮಾಜಿಕ ಉಪಯುಕ್ತ ಉತ್ಪಾಧನಾ ಕಾರ್ಯ(ಸಾ ಉ ಉ ಕಾ) ಮುಂತಾದ ಶೈಕ್ಷಣಿಕ ಮತ್ತು ಶಿಕ್ಷಣಕ್ಕೆ ಪೂರಕ ವಿಷಯಗಳನ್ನು ಕಲಿಸಿತಿದ್ದರು.

ಆದರೆ ಇತ್ತೀಚಿಗೆ ನಾನು ಕಂಡಂತೆ ಈ ಕಾರ್ಯಶಿಕ್ಷಣ, ಮೌಲ್ಯ ಶಿಕ್ಷಣ, ದೈಹಿಕ ಶಿಕ್ಷಣ, ಸಾಮಾಜಿಕ ಉಪಯುಕ್ತ ಉತ್ಪಾಧನಾ ಕಾರ್ಯ(ಸಾ ಉ ಉ ಕಾ) ಮುಂತಾದ ಶಿಕ್ಷಣಕ್ಕೆ ಪೂರಕ ವಿಷಯಗಳ ಸಮಯವನ್ನು, ಕೇವಲ ಆಟಕ್ಕೊ ಇಲ್ಲವೇ ಯಾವುದಾದರು ಸಾಂಸ್ಕೃತಿಕ ಕಾರ್ಯಕ್ರಮಕ್ಕೊ ಅಥವಾ ಉಳಿದ ಹೋದ ಇತರೆ ವಿಷಯದ ವಾರ್ಷಿಕ ಪಠ್ಯಕ್ರಮವನ್ನು ಪೂರ್ತಿಗೊಳಿಸಲು ಬಳಸಿಕೊಳ್ಳುವುದನ್ನು ನಾವು ನೋಡಿದ್ದೇವೆ.

ಅಷ್ಟೆ ಏಕೆ ಕೇವಲ ಅಂಕಗಳ ಲೆಕ್ಕದಲ್ಲಿ ಮಕ್ಕಳ ಬುದ್ಧಿಮತ್ತೆಯನ್ನು ಅಳೆಯುತ್ತಿರುವ ಪ್ರಚಲಿತ ಸಮಯದಲ್ಲಿ, ಹೇಗಾದರು ಮಾಡಿ ಉದ್ಯೋಗವನ್ನು ಪಡೆಯುವುದೇ ಶಿಕ್ಷಣದ ಗುರಿ ಎನ್ನುವಂತಹ ಹಫಹಫೆಯಲ್ಲಿರುವ ಪಾಲಕರಿಗೆ ಮಕ್ಕಳ ಮಾನವಿಕ ಅಂದರೆ ಮೌಲ್ಯಯುಕ್ತ ಜೀವನ ಬೇಳವಣಗೆಯ ಬಗ್ಗೆ ಯೋಚಿಸಲೂ ಸಮಯವೆಲ್ಲಿದೆ ಹೇಳಿ? ಶಿಕ್ಷಣದ ಬಹುಮುಖ್ಯ ಗುರಿ ಉದ್ದೇಶಗಳೆ ಬೇರೊಂದು ರೀತಿಯಲ್ಲಿ ನಿರ್ದೇಶಿಸಲ್ಪಡುತ್ತಿರುವುದರಿಂದ ಪಾಲಕರಾದರು ಏನು ಮಾಡಿಯಾರು ಎನ್ನುವ ಅಬೋಧ ಮುಗ್ಧತೆಯನ್ನು ತೋರ್ಪಡಿಸುತ್ತಿರುವ ಪಾಲಕರೇ ಸ್ವಲ್ಪ ಯೋಚಿಸಿ.

ನಮ್ಮ ಮಕ್ಕಳು ಉತ್ತಮವಾಗಿ ಓದಬೇಕು, ಒಳ್ಳೆಯ ಕೆಲಸವನ್ನು ಜೀವನೋಪಾಯಕ್ಕಾಗಿ ಆಯ್ಕೆ ಮಾಡಿಕೊಳ್ಳಬೇಕು ಅವರು ನಮ್ಮಂತೆ ತಮ್ಮ ಜೀವನದಲ್ಲಿ ಕಷ್ಟ ಪಡಬಾರದು, ಸಮಾಜದಲ್ಲಿ ಒಂದು ಉತ್ತಮ ಸ್ಥಾನವನ್ನು ಹೊಂದಿ, ಜೀವನದಲ್ಲಿ ಏನಾದರು ಒಂದನ್ನು ಸಾಧಿಸಬೇಕು ಎನ್ನುವುದರಲ್ಲಿ ಯಾವುದೇ ತಪ್ಪಿಲ್ಲ ಮತ್ತು ಇದು ಸಹಜವು ಕೂಡ, ಇದರಲ್ಲಿ ಯಾವುದೇ ಉತ್ಪ್ರೇಕ್ಷೆ ಏನು ಕಂಡುಬರುವುದಿಲ್ಲ ಮತ್ತು ಪ್ರತಿಯೊಬ್ಬ ಪಾಲಕನು ತನ್ನ ಮಕ್ಕಳ ಏಳಿಗೆಯಲ್ಲಿ ಕಾಣುವಂತಹ ಸುಖವನ್ನು ಬೇರಾವುದರಲ್ಲೂ ಕಾಣಲು ಸಾಧ್ಯವಿಲ್ಲ.

ಆದರೆ ಕೇವಲ ನನ್ನ ಮಗನೇ ಎಲ್ಲದರಲ್ಲೂ ಪ್ರಥಮವಾಗಿರಬೇಕು, ಅದು ಅವರ ಮಕ್ಕಳ ಪ್ರಯತ್ನದಿಂದಾದರು ಸರಿ ಇಲ್ಲವೆ ಅವರ ಪಾಲಕರ ಒಳ ಪ್ರಯತ್ನದಿಂದಾದರು ಸರಿಯೇ! ಎನ್ನುವ ನೀಚತನ, ಕೆಳಮಟ್ಟದ ಕಾರ್ಯಕ್ಕೆ ಕೈಹಾಕುವುದಿದೆಯಲ್ಲ ಅದು ನಮ್ಮ ಅಂದರೆ ಪಾಲಕರ ಮಾನವನ್ನು ಇನ್ನೂ ಮಣ್ಣುಪಾಲು ಮಾಡುವುದಲ್ಲದೆ ನಮ್ಮ ಮಕ್ಕಳ ನೈತಿಕತೆಯನ್ನು ನಿರ್ಮೂಲನೆ ಮಾಡುವುದರಲ್ಲಿ ಯಾವುದೇ ಸಂದೇಹವಿಲ್ಲ .

ಹಾಗಾಗಿಯೆ ನಾವು ಇತ್ತೀಚಿಗೆ ಸುದ್ದಿ ಮಾದ್ಯಮ ಗಳಲ್ಲಿ ಅಗಾಗ ಕೇಳುತ್ತಿರುತ್ತೇವೆ, ಕೇಳಿದ್ದನ್ನು ಕೊಡದ ತಂದೆಯನ್ನು ಗುಂಡಿಕ್ಕಿ ಕೊಂದ ಮಗ! ತನಗಿಂತ ಓದುವುದರಲ್ಲಿ ಮುಂದಿದ್ದಾನೆ ಎನ್ನುವ ಕಾರಣಕ್ಕೆ ಸಹಪಾಠಿಯನ್ನೇ ಇರಿದು ಕೊಂದ ಸ್ನೇಹಿತ! ಇನ್ನು ಇದೇ ಮುಂದುವರಿದು ಮೂರು ಮಕ್ಕಳಿದ್ದರು ಅನಾಥ ಶವವಾದ ಪಾಲಕರು! ಉನ್ನತ ಸರಕಾರಿ ಹುದ್ದೆಯಲ್ಲಿದ್ದರು ತನ್ನ ಪಾಲಕರನ್ನು ಹಳೆಯ ಟಾಯ್ಲೆಟ್ ನಲ್ಲಿ ಕಳೆದ ಹತ್ತು ವರ್ಷಗಳಿಂದ ಕೂಡಿಹಾಕಿದ್ದ ಮಗ, ಮತ್ತೂ ಮುಂದುವರಿದು ಮೂರರ ಹಸುಗೂಸನ್ನು ಮುಕ್ಕಿದ ತಂದೆ! ಸ್ನೇಹಿತೆಯನ್ನೆ ಅತ್ಯಚಾರವೆಸಗಿ ಕೊಂದ ಗೆಳೆಯರು, ಮಾನಸಿಕ ಅಸ್ವಸ್ಥತೆಯನ್ನು ಲೈಂಗಿಕತೆಗೆ ಬಳಸಿ ಗರ್ಭವತಿಯನ್ನಾಗಿಸಿದ ದುರುಳರು! ಇತ್ತೀಚಿಗಷ್ಟೆ ಕಳೆದು ಹೋದ ಮೊಬೈಲ್ ಹುಡುಕಲು ಶಾಲಾ ಬ್ಯಾಗು ತಪಾಷಣೆಯ ವೇಳೆ ಮಕ್ಕಳ ಸ್ಕೂಲ್ ಬ್ಯಾಗಿನಲ್ಲಿ ಕಾಂಡೋಮ್, ಗರ್ಭನಿರೋಧಕ ಮಾತ್ರೆಗಳು ಪತ್ತೆ!!.

ಈಗ ಹೇಳಿ ಪಾಲಕರಾದ ನಾವೆಲ್ಲರೂ ಎಲ್ಲೋ ಒಂದು ಹಂತದಲ್ಲಿ ಎಡವುತ್ತಿರುವುದು ಕಾಣುತ್ತಿಲ್ಲವೆ? ಅಯ್ಯೊ ಇದಕ್ಕೆಲ್ಲ ಕೇವಲ ಮೌಲ್ಯ ಶಿಕ್ಷಣ ಇಲ್ಲದಿರುವುದೇ ಕಾರಣವಲ್ಲ, ಕಾಲ ಬದಲಾಗಿದೆ, ಸಾಮಾಜಿಕ ಮಾಧ್ಯಮಗಳು ಇದಕ್ಕೆಲ್ಲ ಕಾರಣ ಎನ್ನುವ ಈ ಹಾಳು ಮೊಳು ವರದಿಗಳನ್ನು ಎಲ್ಲಿಯವರೆಗೆ ಹೇಳುತ್ತಾ ಕುಳಿತುಕೊಳ್ಳುತ್ತೀರಿ? ಇರುವುದನ್ನು ಒಪ್ಪಿಕೊಳ್ಳಿ.

ಇನ್ನು ಕೆಲ ಆಘಾತಕಾರಿ ವಿಷಯಗಳನ್ನು ನಾನು ಜವಾಬ್ದಾರಿಯುತ ಪಾಲಕರ ಬಳಿ ಕೇಳುತ್ತೇನೆ ಸಾಧ್ಯವಾದರೆ ಇದಕ್ಕೂ ಏನಾದರು ಸಬೂಬು ಇದ್ದರೆ ಹೇಳಿ," ಇತ್ತೀಚಿನ ಒಂದು ಸರ್ವೆ ಹೇಳುತ್ತದೆ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕ/ಕಿಯರು ಹೇಳುತ್ತಾರೆ "ಹೌದು ನಮ್ಮ ಮಕ್ಕಳಲ್ಲಿ ಅನಾಹುತಕಾರಿ ಮತ್ತು ಅತಿ ಎನಿಸುವಂತಹ ಬದಲಾವಣೆಯಾಗುತ್ತಿದೆ! ಮಕ್ಕಳ ನೈತಿಕ ಮಟ್ಟ ಗಣನೀಯವಾಗಿ ಕುಸಿಯುತ್ತಿದೆ"

ಮಕ್ಕಳು ನಮ್ಮನ್ನು ಬೇರೇಯದೆ ರೀತಿಯಲ್ಲಿ ನೋಡುತ್ತಾರೆ, ನಮ್ಮ ಅಂಗಾಂಗಳನ್ನು ಗಮನಿಸುತ್ತಾರೆ ಮತ್ತು ಅದನ್ನು ನಮಗೆ ಗೊತ್ತುಪಡಿಸಲು ಹಿಂಜೆರಿಯುವುದಿಲ್ಲ!. ಇದು ಕಥೆಯಲ್ಲ ಇತ್ತೀಚಿಗೆ ಬಹಿರಂಗವಾಗಿಯೇ ಕೆಲ ಶಿಕ್ಷಕಿಯರು ಮಾಧ್ಯಮದಲ್ಲಿ ಹೇಳಿಕೊಂಡಿದ್ದಾರೆ. ಇದಕ್ಕೆ ಶಿಕ್ಷಕರೂ ಹೊರತಾಗಿಲ್ಲ! ಹಾಗಾದರೆ ನಾವೆಲ್ಲಿ ಎಡವುತ್ತಿದ್ದೇವೆ? ಈಗಲಾದರೂ ನಿಮಗೆ ಹೌದು ಎನಿಸಿದ್ದೇ ಆದರೆ ಬನ್ನಿ ಒಮ್ಮೆ ನಮ್ಮನ್ನು ನಾವು ಅಂತರವಲೋಕನ ಮಾಡಿಕೊಳ್ಳೋಣ, ಕಾರಣಗಳು ಅತಿ ಸಣ್ಣವು ಸರಿಯಾದ ಸಮಯದಲ್ಲಿ ಅಳಿಸಬೇಕು ಅಷ್ಟೆ.

2. ಮಕ್ಕಳೆ, ಅವರಿಗೇನು ಗೊತ್ತು ಎನ್ನುವುದನ್ನು ಮೊದಲು ನಿಮ್ಮ ತಲೆಯಿಂದ ತೆಗೆದು ಹಾಕಿ, ಅದು ನಿಮ್ಮದೇ ಮಗು ನಿಮ್ಮ ರಕ್ತವೇ ಅದರ ಮೈಯಲ್ಲಿ ಹರಿಯುತ್ತಿರುವುದು, ನಿಮ್ಮದೇ ವಂಶವಾಹಿನಿಗಳ ಸಾರ ಆ ಮಗು. ಬಹುಮುಖ್ಯವಾಗಿ ಮತ್ತು ಮೂಲಭತವಾಗಿ ಕೆಲವು ಅಂಶಗಳು ಆಗಲೆ ಫ್ರೀ ಲೋಡೆಡ್ ಇನ್ನೇನಿದ್ದರು ಅವುಗಳಿಗೆ ಸೂಕ್ತ ವೇದಿಕೆಯನ್ನಷ್ಟೇ ನೀವು ಒದಗಿಸಬೇಕಾಗಿರುವುದು, ಅವರ ಇತಿಮಿತಿಯಲ್ಲಿ ಸಿಕ್ಕ ಅವಕಾಶಗಳನ್ನು ಅನುಕೂಲಗಳನ್ನು ಬಳಸಿಕೊಂಡು ಯಾರು ತಮ್ಮನ್ನು ತಾವು ಹೆಚ್ಚು ಹೆಚ್ಚು ನೈತಿಕ ಜೀವನಕ್ಕೆ ತೆರೆದುಕೊಳ್ಳುತ್ತಾರೆಯೊ ಅವರೇ ಹೆಚ್ಚು ಹೆಚ್ಚು ಮೌಲ್ಯಭರಿತ ಜೀವನವನ್ನು ಅನುಭವಿಸುತ್ತಾರೆ.

ಆದರೆ ಕೆಲ ಹಂತಗಳಲ್ಲಿ ಮಕ್ಕಳು ಬೆಳೆಯುತ್ತಾ ಹೋದಂತೆ ಈ ಮೌಲ್ಯಗಳು ಕಡಿಮೆಯಾಗುವ ಸಂಭವಗಳು ಹೆಚ್ಚಿರುತ್ತವೆ ಅದಕ್ಕೆ ಕಾರಣವೂ ನಾವೇ



ಜಿ. ಶಿವಕುಮಾರ್ ಸೋಗಿ,
ಕಾರವಾರ, ಕೈಗಾ.

ಎಂಬುದನ್ನು ಸಹ ನಾವು ಮರೆಯಬಾರದು. ನಮ್ಮ ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸಲು ಪಾಲಕರಾದ ನಮ್ಮ ಪ್ರಯತ್ನ ನಿರಂತರವಾಗಿರಬೇಕು. ಅದು ಯಾವುದೇ ರೂಪದಲ್ಲಾಗಬಹುದು.

ಉದಾಹರಣೆಗಾಗಿ

#.ಮಕ್ಕಳಿಗೆ ಪ್ರತಿ ನಿತ್ಯ ಕಥೆ ಕೇಳುವುದು ಭಜನೆ, ಪುರಾಣ, ಮಹಾಪುರುಷರ ಪರಿಚಯ, ತ್ಯಾಗ, ಸಹಕಾರ ಸಹಬಾಳ್ವೆಯ ಪರಿಚಯ ಮುಂತಾದ ಕಥೆಗಳನ್ನು ಹೇಳುವುದರಿಂದ ಅವರು ಈ ವಿಷಯಗಳನ್ನು ತಮ್ಮ ವರ್ತನೆಯಲ್ಲೂ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

#. ಹಾಗೆಯೆ ಪಾಲಕರು ಸಹ ಅಂತಹ ಸಮಯದಲ್ಲಿ ಸಾಕಷ್ಟು ಧನಾತ್ಮಕ ಅಂಶಗಳನ್ನ ಹಾಗೂ ಉದಾಹರಣೆಯಗಳನ್ನು ಹೆಚ್ಚು ಹೆಚ್ಚು ನೀಡಿದರೆ ಅದು ಮಕ್ಕಳ ಮನಸ್ಸಿನಲ್ಲಿ ಇಂತಹ ಉತ್ತಮ ಮೌಲ್ಯಗಳು ಗಟ್ಟಿಯಾಗಿ ಬೇರೂರಲು ಸಹಕಾರಿಯಾಗುತ್ತದೆ.

3. ಪ್ರಾಮಾಣ ಕತೆ, ಪರಿಶ್ರಮ ಹಾಗೂ ಸಹಾನುಭೂತಿಯಿಂದ ನಮ್ಮ ಸಮಾಜವನ್ನು ಗೆಲ್ಲಬಹುದು ಎನ್ನುವುದನ್ನು ಮಕ್ಕಳಿಗೆ ಮನವರಿಕೆ ಮಾಡಬೇಕು.

ನಮ್ಮ ಮಕ್ಕಳು ಕಲಿಯುವ ಹಂತದಲ್ಲಿ ಕೆಲ ತಪ್ಪು ಮಾಡುವುದು ಸಹಜ ಅಂತಹ ಸಂದರ್ಭದಲ್ಲಿ ಅವರ ಮಕ್ಕಳಿಗೆ ತಪ್ಪು ಸಹಜ ಮತ್ತು ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ಬೆಳಸಬೇಕು ಸರಿ-ತಪ್ಪುಗಳ ಬಗ್ಗೆ ತಿಳಿಸಿ ಅವರ ವರ್ತನೆಯಲ್ಲಿನ ಬದಲಾವಣೆಯಿಂದ ನಮ್ಮ ಸುತ್ತಲಿನ ಸಮಾಜದಲ್ಲಿನ ಬದಲಾವಣೆಯನ್ನು ನಮ್ಮ ಮಕ್ಕಳು ಗಮನಿಸುವಂತೆ ಮಾಡಬೇಕು.

4. ಒಳ್ಳೆಯದನ್ನು ಮಾಡಲು ಉತ್ತಮ ಹವ್ಯಾಸಗಳು ಸಹಕಾರಿ.

ಒಳ್ಳೆಯದನ್ನು ಮಾಡಲು ಉತ್ತಮ ಹವ್ಯಾಸಗಳು ಸಹಕಾರಿ, ಈ ಉತ್ತಮ ಹವ್ಯಾಸಗಳೇ ನಮ್ಮ ಬದುಕಿನ ನೈಜತೆಯ ಪ್ರತೀಕಗಳು, ನಮ್ಮ ಮಕ್ಕಳನ್ನು ಇಂತಹ ಉತ್ತಮ ಹವ್ಯಾಸದ ಹಾದಿಯಲ್ಲಿ ನಾವು ನೆಡೆಸಬೇಕು ಎಂದರೆ ಮೋದಲು ಪಾಲಕರಾದ ನಾವು ಸಹ ಒಳ್ಳೆಯದನ್ನು ಮಾಡುವ ಮನಸ್ಸನ್ನು ಹೊಂದಿರಬೇಕು ಮತ್ತು ನಾವು ಹಾಗೆಯೇ ನೆಡೆದುಕೊಳ್ಳಬೇಕು. ಆಗ ನಮ್ಮ ಮಕ್ಕಳು ತಾವಾಗೆಯೆ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ.

ಅಂತಹ ಉತ್ತಮ ಹವ್ಯಾಸಗಳು ಅಂದರೆ ಅದು ಒಳ್ಳೆಯ ಪುಸ್ತಕಗಳನ್ನು ಓದುವುದು, ಸಮಾಜಕ್ಕೆ ಹಿತಕರವಾದ ಸೃಜನಶೀಲ ಕಾರ್ಯಗಳಲ್ಲಿ ಪಾಲ್ಗೊಳ್ಳುವುದು, ಉತ್ತಮ ವಿಚಾರಗಳನ್ನು ಬರೆದು ಪ್ರಚಾರಪಡಿಸುವುದು, ಒಳ್ಳೆಯ ಆಟೋಟಗಳಲ್ಲಿ ಪಾಲ್ಗೊಳ್ಳುವುದು, ಸಮಷ್ಠಿ ಹಿತ ಕಾಯಿವ ಕೆಲಸಗಳಲ್ಲಿ ಆಸಕ್ತಿ ಸಹಕಾರ ಸಹಬಾಳ್ವೆ, ಸಂಯಮ ಹೀಗೆ ಉತ್ತಮವಾದ ಹವ್ಯಾಸಗಳು ನಮ್ಮ ಮಕ್ಕಳನ್ನು ಸಮಾಜಕ್ಕೆ ಒಳ್ಳೆಯ ಕಾರ್ಯಗಳನ್ನು ಮಾಡಲು ಪ್ರೇರೇಪಿಸುತ್ತವೆ. ಇಂತಹ ಪ್ರಾಮಾಣಕ, ಸತತ ಪರಿಶ್ರಮ ಹಾಗೂ ಎಲ್ಲರಲ್ಲಿಯೂ ಸಹಾನುಭೂತಿಯಿಂದ ಇರುವುದರಿಂದ ನಾವು ನಮ್ಮ ಸುತ್ತಲಿನ ನಮ್ಮ ಸಮಾಜವನ್ನು ಗೆಲ್ಲಬಹುದು ಎನ್ನುವುದನ್ನು ನಮ್ಮ ಮಕ್ಕಳಿಗೆ ನಾವು ಸ್ವತಃ ಮಾಡುವುದರಿಂದ ಮನವರಿಕೆ ಮಾಡಬೇಕು.

5. "ಏನೇ ಬರಲಿ – ಒಗ್ಗಟ್ಟು ಇರಲಿ" ಸಾಂಘಿಕ ಶಕ್ತಿಯಲ್ಲಿನ ಸಾರವನ್ನು ಅರಿಯುವಂತೆ ಮಾಡಿ.

ಒಂದು ಸಣ್ಣ ಕಥೆ ನಮ್ಮ ಕಾಲದ ಪುಸ್ತಕದಲ್ಲಿತ್ತು" ಒಗ್ಗಟ್ಟಿನಲ್ಲಿ ಬಲವಿದೆ" ನೆನಪು ಮಾಡಿಕೊಳ್ಳಿ ಕೊಲುಗಳನ್ನು ಒಂದು, ಎರಡು ನಂತರ ಮೂರು ಹೀಗೆ ಒಟ್ಟಿಗೆ ನೀಡಿ ಅವುಗಳನ್ನು ಮುರಿದು ಹಾಕಲು ಹೇಳಿದ್ದು, ಕೋಲುಗಳ ಸಂಖ್ಯೆ ಹೆಚ್ಚಾದಂತೆ ಅವುಗಳನ್ನು ಮುರಿಯಲು ಸಾಧ್ಯವಾಗದಿರುವುದು

ಆಗ ಶಿಕ್ಷಕರು ಮಕ್ಕಳನ್ನು ಉದ್ದೇಶಿಷಿ ಹೀಗೆ ಹೇಳಿದ್ದು "ಮಕ್ಕಳೇ ಈ ಕಥೆಯಿಂದ ನಮೆಗೆಲ್ಲ ಏನು ತಿಳಿದುಬರುತ್ತದೆ ಎಂದರೆ "ನಾವು ಒಬ್ಬೊಬ್ಬರಾಗಿದ್ದರೆ ಶಕ್ತಿ ಕಡುಮೆ ಅದೇ ನಾವು ಎಲ್ಲರು ಒಟ್ಟಿಗೆ ಇದ್ದರೆ ನಮ್ಮ ಶಕ್ತಿ ಅಗಾದವಾಗಿರುತ್ತದೆ" ನಾವು ಯಾವುದೇ ಕೆಲಸವನ್ನು ಎಲ್ಲರ ಸೇರುವಿಕೆಯಿಂದ, ಒಟ್ಟಾಗಿ ನಮ್ಮ ನಮ್ಮಲ್ಲಿ ಸಹಕಾರ ಮನೋಭಾವನೆಯಿಂದ ಒಬ್ಬರು ಮೊತ್ತೊಬ್ಬರಿಗೆ ಸಹಾಯ ಮಾಡುವುದರಿಂದ ನಾವು ಅಂದುಕೊಂಡ ಕಾರ್ಯವನ್ನು ಯಶಸ್ವಿಯಾಗಿ ಮಾಡಿಬಹುದು". ಎನ್ನುವ ಸಾಂಘಿಕ ಶಕ್ತಿಯಲ್ಲಿನ ಸಾರವನ್ನು ನಮ್ಮ ಮಕ್ಕಳು ಅರಿಯುವಂತೆ ಮಾಡಬೇಕು, ಅದಕ್ಕೆ ಹೇಳುವುದು "ಏನೇ ಬರಲಿ – ಒಗ್ಗಟ್ಟು ಇರಲಿ" ಸಾಮಾಜಿಕ ಆರೋಗ್ಯ ಸರಿಯಾಗಿರಲು ಸಾಂಘಿಕ ಶಕ್ತಿಯ ಕಲ್ಪನೆ ಮತ್ತು ಕಾರ್ಯಚರಣೆ ಅತಿಮುಖ್ಯವಾಗುತ್ತದೆ.

6. ದೇಶ ಸುತ್ತಿ ನೋಡು ಕೋಶ ಓದಿ ತಿಳಿ

ಇದೊಂದು ಮಾತು/ಗಾದೆ ಸಾಕು ಏಕೆ ನಾವು ದೇಶವನ್ನು ಸುತ್ತಬೇಕು ಮತ್ತು ಏಕೆ ನಾವು ಪುಸ್ತಕಗಳನ್ನು ಓದಬೇಕು ಎನ್ನುವುದನ್ನು ಅರಿತುಕೊಳ್ಳಲು, ಒಂದು ಒಳ್ಳೆಯ ಪುಸ್ತಕ ಹತ್ತು ಜನ ಒಳ್ಳೆಯ ಸ್ನೇಹಿತರಿಗೆ ಸಮಾನವಾಗಿ ನಿಲ್ಲಬಲ್ಲದು ಮತ್ತು ಅದೇ ಒಂದು ಒಳ್ಳಯ ಪುಸ್ತಕ ಯಾವತ್ತು ನಿನ್ನ ಆತ್ಮೀಯ ಸ್ನೇಹಿತನಂತೆ ಸದಾಕಾಲ ನಿನ್ನ ಬೆನ್ನಿಗೆ ನಿಲ್ಲುತ್ತದೆ ಕೂಡ.

ನಮ್ಮಲ್ಲಿ ಪುರಾಣ ಪುಣ್ಯ ಕಥೆಗಳ, ನೈತಿಕ ಮೌಲ್ಯಗಳನ್ನು ತಿಳಿಸುವ ಪುಸ್ತಕಗಳಿಗೇನು ಕೊರೆತೆ ಇಲ್ಲ, ಅಂತಹ ಪುಸ್ತಕಗಳನ್ನು ನೀವು ಓದಬೇಕು ಮತ್ತು ಮಕ್ಕಳಿಗೆ ಅವರ ಬಾಲ್ಯದಿಂದಲೆ ಓದುಲು ಪ್ರೇರೇಪಿಸಬೇಕು. ಕೊನೆಯ ಪಕ್ಷ ಪಾಲಕರಾದ ನಾವು ಓದಿ ಮಕ್ಕಳಿಗೆ ಅವುಗಳನ್ನು ಕಥೆಗಳ ರೂಪದಲ್ಲಿ ಹೇಳಬೇಕು. ಏಕೆಂದರೆ ನಮ್ಮ ಸಮಾಜ, ಸಂಸ್ಕೃತಿ, ಧಾರ್ಮಿಕತೆಗೆ ಸಂಬಂದಿಸಿದ ಕೆಲ ಪುಸ್ತಕಗಳು ಹಾಗು ಅವುಗಳ ಜೊತೆಗೆ ಕೆಲವು ಆಧ್ಯಾತ್ಮಿಕ ಚಿಂತನೆಗಳು ನಮ್ಮಲ್ಲಿ ಮತ್ತು ನಮ್ಮ ಮಕ್ಕಳಲ್ಲಿ ಅವರ ವರ್ತನೆಗಳಲ್ಲಿ ಹಾಗೂ ಅವರ ಸ್ವಭಾವದಲ್ಲಿ ಹಲವಾರು ಧನಾತ್ಮಕ ಅಂಶಗಳನ್ನು ತಂದು ತನ್ಮೂಲಕ ಸಮಾಜದಲ್ಲಿನ ನಕಾರಾತ್ಮಕ ಅಂಶಗಳು ಕಡಿಮೆಯಾಗುತ್ತವೆ.

ನಮ್ಮಂತೆ ಇತರರ ಬಗ್ಗೆ ಇತರ ಜೀವಗಳ ಬಗ್ಗೆ ಸಹನುಬೂತಿ, ಅಂತಕರಣ ಜಾಗೃತವಾಗಿ ಮಕ್ಕಳು/ಮನುಷ್ಯ ಕೆಟ್ಟ ಕೆಲಸಗಳಿಂದ ದೂರ ಉಳಿಯುತ್ತಾನೆ. ಸಮಾಜದ ಸ್ವಾಸ್ಥ್ಯ ಸರಿಯಾಗಿರುತ್ತದೆ.

ಹಾಗೆಯೆ ನಮ್ಮ ಸುತ್ತಲಿನ ಪರಿಸರದ ಬಗ್ಗೆ ಸ್ಥಳಗಳ ಬಗ್ಗೆ, ಅಲ್ಲಿಯ ವಿಶೇಷತೆಯ ಬಗ್ಗೆ, ಅಲ್ಲಿಯ ಇತಿಹಾಸದ ಬಗ್ಗೆ ಓದುವುದರ ಜೊತೆ ಜೊತೆಗೆ ಖುದ್ದಾಗಿ ಆ ಸ್ಥಳವನ್ನು ಸಂಪರ್ಕಿಸಿ, ಸಂದರ್ಶಿಸಿ ಬರುವುದರಿಂದ ಜ್ಞಾನದ ಜೊತೆ ಜೊತೆಗೆ, ಅಲ್ಲಿಯ ಭಾಷೆ, ವೇಷಬೂಷಣ, ಊಟ ಉಪಚಾರಗಳು, ಆಚಾರ ವಿಚಾರಗಳು, ನೆಡೆ ನುಡಿಗಳು ಖುದ್ದಾಗಿ ನಮ್ಮ ಗಮನಕ್ಕೆ ಬರುವುದರಿಂದ ನಮ್ಮ ಸಮಾಜ, ಸಂಸ್ಕೃತಿ, ಪರಂಪರೆಯ ಬಗ್ಗೆ ನಮ್ಮಲ್ಲಿ ಕುತೂಹಲ, ಹೆಮ್ಮೆ ಮತ್ತು ಒಂದು ಸಂತೃಪ್ತಿ ಹಾಗು ಸಮಾದಾನವಾಗುತ್ತದೆ ಅಲ್ಲವೆ ಹಾಗಾಗಿ ಪಾಲಕರಾದ ನೀವು ದೇಶ ಸುತ್ತಿ ನೋಡಿ ಹಲವಾರು ಕೋಶಗಳನ್ನು ಓದಿ ತಿಳಿಯಿರಿ ಜೊತೆಗೆ ಇಂತಹ ಕಾರ್ಯದಲ್ಲಿ ನಿಮ್ಮ ಮಕ್ಕಳು ನಿಮ್ಮ ಜೊತೆಗೆ ಇರುವುದನ್ನು ಖಾತ್ರಿ ಪಡಿಸಿಕೊಳ್ಳಿ ಅಷ್ಟೆ.

7. ಬೇಕು, ಅವಶ್ಯಕತೆ ಮತ್ತು ಅನಿವಾರ್ಯತೆಯ ಅರ್ಥವನ್ನು ತಿಳಿದುಕೊಂಡರೆ ನೀವು ಅರ್ದ ಜೀವನ ಗೆದ್ದಹಾಗೆ, ಒಂದು ವೇಳೆ ನಿಮ್ಮ ಮಕ್ಕಳಿಗೆ ಇದರ ಮನವರಕೆ ಮಾಡಿಕೊಟ್ಟರೆ ಪೂರ್ತಿಜೀವನ ಗೆದ್ದಹಾಗೆ!

ಖಂಡಿತವಾಗಿ ಈ ಮಾತನ್ನು ಎದೆತಟ್ಟಿ ಹೇಳಿಕೊಳ್ಳುತ್ತೇನೆ ಪಾಲಕರಾದ ನೀ/ನಾವು ನಮ್ಮ ಜೀವನದ, ನಮ್ಮ ಬದುಕಿಗೆ, ನಮ್ಮ ನಿತ್ಯದ ಚಟುವಟಿಕೆಗಳಿಗೆ ಯಾವುದು ಬೇಕು ಯಾವುದು ಬೇಡ, ಯಾವುದು ಅವಶ್ಯಕ, ಯಾವುದು ಅನಾವಶ್ಯಕ ಮತ್ತು ಯಾವುದು ಅನಿವಾರ್ಯ ಹಾಗು ಅನಿವಾರ್ಯವಲ್ಲ ಎನ್ನುವುದರ ಜೊತೆಗೆ ಬೇಕು, ಅವಶ್ಯಕ ಮತ್ತು ಅನಿವಾರ್ಯ ಎನ್ನುವುದಾದರೆ ಏಕೆ ಬೇಕೆ, ಏಕೆ ಅವಶ್ಯಕ ಮತ್ತು ಏಕೆ ಅನಿವಾರ್ಯ ಹಾಗು ಎಷ್ಟು ಬೇಕು, ಎಷ್ಟು ಅವಶ್ಯಕ ಮತ್ತು ಇದರ ಅನಿವಾರ್ಯತೆ ಎಷ್ಟು? ಎನ್ನುವುದನ್ನು ಸ್ಪಷ್ಟ ಪಡಿಸಿಕೊಳ್ಳಬೇಕು.

ಒಂದು ವೇಳೆ ಬೇಡ ಎನ್ನುವುದಾದರೂ ಯಾವುದಕ್ಕಾಗಿ ಬೇಡ ಯಾಕಾಗಿ ಇದರ ಅವಶ್ಯಕತೆ ಇಲ್ಲ ಮತ್ತು ಇದು ಇಲ್ಲದಿದ್ದರೆ ಏನಾಗುತ್ತದೆ? ಎನ್ನುವುದನ್ನೂ ಸಹ ತಿಳಿದುಕೊಂಡರೆ ನಿಮ್ಮ ಲೆಕ್ಕ ಪಕ್ಕ.

ನೆನೆಪಿರಲಿ ಕೇವಲ ಇದರ ಅವಶ್ಯಕತೆ ನಮಗಿದೆಯೆ? ಅಥವಾ ಇಲ್ಲವೆ? ಎನ್ನುವುದಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಇದು ನನಗೆ ಬೇಕಾಗಿದೆಯೆ? ಇದರ ಅವಶ್ಯಕತೆ ನನಗಿದೆಯೆ? ಇದು ನನಗೆ ಅನಿವಾರ್ಯವೇ? ಎನ್ನುವುದನ್ನು ಮೊದಲು ಮನಗಾಣಬೇಕು.

ಆಗ ಪಾಲಕರಿಂದ ಮಕ್ಕಳಿಗೆ ಹಾಗು ಮಕ್ಕಳಿಂದ ಪಾಲಕರಿಗೆ ಉಂಟಾಗಬಹುದಾದ ಹಲವಾರು ಸಮಸ್ಯೆಗಳು ಅವುಗಳ ಉಗಮದಲ್ಲಿಯೆ ಮೊಟುಕುಗೊಳ್ಳುತ್ತವೆ. ಆಗ ನೀವು ನಿಮ್ಮ ಮಕ್ಕಳಿಗೆ ಇಲ್ಲ ಎನ್ನಲು ಅಂಜುವುದಿಲ್ಲ ಮತ್ತು ನಿಮ್ಮ ಮಕ್ಕಳು ಅನವಶ್ಯಕ ಮತ್ತು ಅನಿವಾರ್ಯವಲ್ಲದ ಅನಗತ್ಯೆ ಬೇಡಿಕೆಗಳನ್ನು ನಿಮ್ಮ ಮುಂದೆ ಇಡುವುದಿಲ್ಲ ಕೂಡ.

ಇವುಗಳ ಜೊತೆಯಲ್ಲಿ ಸಮಾಜದಲ್ಲಿ ಬದುಕಲು ಮೂಲಭೂತವಾಗಿ ವ್ಯಕ್ತಿಯೊಬ್ಬನಲ್ಲಿ ಇರಬೇಕಾದ ಕೆಲ ಅವಶ್ಯಕ ಗುಣಗಳು ನಮ್ಮ ಮಕ್ಕಳಲ್ಲಿ ಬೆಳೆಯುತ್ತವೆ.

ಉದಾ:- ಇಲ್ಲಾ, ಆಗುವುದಿಲ್ಲ, ನನಗೆ ಬೇಡ, ತಪ್ಪನ್ನು ಒಪ್ಪಿಕೊಳ್ಳುವುದು, ಇತರರ ತಪ್ಪನ್ನು ಮನ್ನಿಸುವುದು, ಹಂಚಿಕೊಳ್ಳುವುದು, ತ್ಯಾಗ ಮಾಡುವುದು, ಬಿಟ್ಟುಕೊಡುವುದು, ಎಲ್ಲರ ಬೇಕು ಬೇಡಗಳನ್ನು ಮನಗಾಣುವುದು, ಮುಖ್ಯವಾಗಿ ಎಲ್ಲರು ನನ್ನಂತೆಯೇ ಸಮಾನರು ಎನ್ನುವ ಗುಣಗಳನ್ನು ಬೇಳಸಲು ಸಹಾಕಾರಿಯಾಗುತ್ತದೆ.

ಹಾಗಾಗಿಯೆ ಹೇಳಿದ್ದು ಮೋದಲು ನಿಮ್ಮ ಬೇಕು, ಅವಶ್ಯಕತೆ ಮತ್ತು ಅನಿವಾರ್ಯತೆಯ ಅರ್ಥವನ್ನು ತಿಳಿದುಕೊಂಡರೆ ನೀವು ಅರ್ಧ ಜೀವನ ಗೆದ್ದಹಾಗೆ, ಒಂದು ವೇಳೆ ನಿಮ್ಮ ಮಕ್ಕಳಿಗೆ ಇದರ ಮನವರಕೆ ಮಾಡಿಕೊಟ್ಟರೆ ಪೂರ್ತಿಜೀವನ ಗೆದ್ದಹಾಗೆ!

ಹಾಗಾದಾಗ ಮಾತ್ರ ಮಗುವಿನ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ, ಮತ್ತು ಸಮಾಜಿಕ ಆರೋಗ್ಯವನ್ನು ಅಂದರೆ ತನ್ಮೂಲಕ ಒಂದು ಮಗುವಿನ ಸರ್ವಾಂಗೀಣ ಆರೋಗ್ಯವನ್ನು ಸಾಧಿಸಿ ಸತ್ಪ್ರಜೆಯನ್ನ ನಮ್ಮ ಈ ಸಮಾಜಕ್ಕೆ ನೀಡಬಹುದಾಗಿದೆ.

ಇದನ್ನೆ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಆರೋಗ್ಯವು "ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿಯಾಗಿದೆ ಮತ್ತು ಕೇವಲ ರೋಗ ಮತ್ತು ದುರ್ಬಲತೆಯ ಅನುಪಸ್ಥಿತಿಯಲ್ಲ " ನಮ್ಮ ಇಂದಿನ ಪಾಲಕ ವರ್ಗ ಕೇವಲ ದೈಹಿಕ ಕಾಣುವಿಕೆಗೆ ಇಲ್ಲವೆ ತೋರ್ಪಡಿಕೆಯ ಬಣ್ಣ ಅಂಗ ಸೌಷ್ಠಕ್ಕೆ ಮಾರುಹೋಗಿ ಎಲ್ಲವನ್ನೂ ಕೇವಲ ತಮ್ಮ ಮೂಗಿನ ನೇರಕ್ಕೆ ತೀರ್ಮಾನಿಸುವ ಹಂತಕ್ಕೆ ಬಂದು ನಿಂತಿದೆ.

ಹೋಲಿಕೆ ಒಂದು ಹಂತಕ್ಕೆ ಒಳ್ಳೆಯದೆ ಆದರೆ ಅವರಂತೆ, ಇನ್ನೋಬ್ಬರಂತೆ ಇವರಿಲ್ಲವಲ್ಲ/ಇವನಿಲ್ಲವಲ್ಲ ಎಂದುಕೊಳ್ಳುವುದು ಎಷ್ಟು ಸರಿ, ಮೊದಲೇ ಹೇಳಿದಂತೆ ಆರೋಗ್ಯ ಎನ್ನುವುದು ಕೇವಲ ದೈಹಿಕ ಮೇಲ್ನೋಟಕ್ಕೆ ಮಾತ್ರ ಸಂಭಂದಿಸಿಲ್ಲ ಅದು ಆ ಮಗುವಿನ/ಮನುಷ್ಯನ ದೈಹಿಕ, ಮಾನಸಿಕ ಹಾಗು ಸಾಮಾಜಿಕ ಮನಸ್ಥಿಯನ್ನು ಅವಲಂಭಿಸಿರುತ್ತದೆ, ಇವೆಲ್ಲವುಗಳ ಒಟ್ಟು ಪಲಿತಾಂಶವೇ ಅವನ/ಅವಳ ನಿಜವಾದ ಆರೋಗ್ಯವಾಗುತ್ತದೆ.

ಹೀಗಿರುವಾಗ ನಾವು ಕೇವಲ ಅಂದಕ್ಕೊ, ಅಲಂಕಾರಕ್ಕೊ, ಬರಿಯ ಬುದ್ಧಿಮತ್ತೆಕ್ಕೊ, ಇಲ್ಲವೇ ಕೇವಲ ಅವರ ಯಾವುದಾದರು ಒಂದು ಕೌಶಲ್ಯವನ್ನು ಅಥವಾ ಸಾಧನೆಯನ್ನು ಒಂದು ಕ್ಷೇತ್ರದ ಉನ್ನತಿಯನ್ನು ಕಂಡು ಅವನು ಆರೋಗ್ಯವಂತನು, ಸಕಲ ಗುಣ ಸಂಪನ್ನನು ಎನ್ನಲು ಸಾದ್ಯವಿಲ್ಲ. ಹಾಗೆಯೇ ಎಲ್ಲರೂ ಎಲ್ಲಾ ಕ್ಷೇತ್ರಗಳಲ್ಲಿ ಎಲ್ಲವನ್ನೂ ಸಾಧಿಸಲು ಸಾದ್ಯವಿಲ್ಲ ಆದರೆ ಈ ಎಲ್ಲವುಗಳ ಮಧ್ಯದಲ್ಲಿ ಒಂದು ಸಾಮರಸ್ಯವನ್ನು ಸಾಧಿಸಿ, ಸರಿದೂಗಿಸಿಕೊಂಡು ಹೋಗುವ ವಿವೇಕವಂತಿಕೆಯನ್ನು ನಾವು ಬೇಳೆಸಿಕೊಳ್ಳಬೇಕು.

ಹಾಗಾಗಿ ಮಗುವಿಗೆ ಆಟವೂ ಬೇಕು, ಪಾಠವೂ ಬೇಕು, ವಿವಿಧ ಸಾಮಾಜಿಕ ಕಲೆಗಳು ಇರಬೇಕು ಇವೆಲ್ಲವುಗಳನ್ನು ಒಟ್ಟುಗೂಡಿಸಿ ಸರಿಯಾದ ಅನುಪಾತಹದಲ್ಲಿ ಮೇಳವೈಸುವ ಚಾಕಚಖ್ಯತೆಯೂ ಇರಬೇಕು ಆಗ ಮಾತ್ರ ನಮ್ಮ ಮಕ್ಕಳು ಆರೋಗ್ಯವಂತ ಮಕ್ಕಳು ಎನಿಸಿಕೊಳ್ಳುತ್ತವೆ. ಸಾಂಘಿಕ ಜೀವನಕ್ಕೆ ಸಜ್ಜಾಗುತ್ತಾರೆ.

ಸರ್ವೇ ಜನ ಸುಖಿನೋ ಭವಂತು.




## ಲಕ್ಷ್ಮೀ ಆಹ್ವಾನಿಸಲು ಸಕಲ ಸಿದ್ಧತೆ



(ಮೊದಲ ಪುಟದಿಂದ)
ಆಕಾಶಬುಟ್ಟಿ, ಪ್ಲಾಸ್ಟಿಕ್ ಮಾವಿನ ತೋರಣಗಳನ್ನು ಕಟ್ಟಿ ಸಿಂಗರಿಸಲಾಯಿತು. ಹಣತೆಗಳನ್ನು ಬೆಳಗಿಸಿದರು.

ಮಾರುಕಟ್ಟೆಯಲ್ಲಿ ಜನ ಜಂಗುಳಿ: ದೀಪಾವಳಿ ಹಬ್ಬದ ನಿಮಿತ್ತ ನಗರದ ಮಾರುಕಟ್ಟೆ ಜನ ಜಂಗುಳಿಯಿಂದ ಕೂಡಿತ್ತು. ನಗರದ ಸೂಪರ್ ಮಾರ್ಕೆಟ್ ಮಾರುಕಟ್ಟೆಯ ಬಟ್ಟೆ ಮತ್ತು ತರಕಾರಿ ಅಂಗಡಿಗಳು ಬೆಳಗ್ಗೆಯಿಂದಲೇ ಗ್ರಾಹಕರಿಂದ ತುಂಬಿ ತುಳುಕುತ್ತಿದ್ದವು. ಪೂಜೆಗೆ ಅಗತ್ಯವಾದ ಕಬ್ಬು, ಬಾಳೆದಿಂಡು, ಹೂವು-ಹಣ್ಣು ಸೇರಿದಂತೆ ಬಹುತೇಕ ವಸ್ತುಗಳ ಬೆಲೆ ಗಗನಕ್ಕೀರಿದ್ದರಿಂದ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿತಟ್ಟಿತು. ಕುಂಬಳಕಾಯಿ ಒಂದಕ್ಕೆ 50 ರಿಂದ 150 ರೂ., ಬಾಳೆದಿಂಡು ಜೊತೆ 30-50 ರೂ., ತೆಂಗಿನ ಗರಿ ಜೋಡಿಗೆ 100 ರಿಂದ 150 ರೂ., ಚೆಂಡು ಹೂ, ಸೇವಂತಿಗೆ, ಕನಕಾಂಬರ ದರಗಳಲ್ಲಿ ಪ್ರತಿ ಕೆಜಿಗೆ ಸಾಮಾನ್ಯಕ್ಕಿಂತ 30 ರಿಂದ 50 ರೂ. ಹೆಚ್ಚಳ ಕಂಡು ಬಂದಿತು. ಆದರೆ, ಹಬ್ಬದ ಆಚರಣೆ ಅನಿವಾರ್ಯವಾಗಿದ್ದರಿಂದ ಬೆಲೆಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೇ, ಖರೀದಿ ಪ್ರಮಾಣವನ್ನು ಕಡಿಮೆಗೊಳಿಸಿದರು. ಅಗತ್ಯ ವಸ್ತುಗಳೊಂದಿಗೆ ವಿವಿಧ ಎಲೆಕ್ಟ್ರಾನಿಕ್ಸ್ ವಸ್ತುಗಳ ಖರೀದಿ, ಮುಂಗಡ ಕಾಯ್ದಿರಿಸುವಿಕೆಗೆ ಗ್ರಾಹಕರು ಮುಗಿಬಿದ್ದಿದ್ದರು. ಕಳೆದ ದೀಪಾವಳಿಗೆ ಹೋಲಿಸಿದರೆ ಈ ವರ್ಷದ ದೀಪಾವಳಿ ಖರೀದಿ ತುಸು ಹೆಚ್ಚಿದೆ ಎನ್ನುತ್ತಾರೆ ವರ್ತಕರು. ಹಬ್ಬದ ಪೂಜೆಗಾಗಿ ಜನರು ಸಿಹಿ ಖರೀದಿಗಾಗಿ ಸ್ವೀಟ್ ಅಂಗಡಿ ಸೇರಿ ಬೇಕರಿ ಅಂಗಡಿಗಳಿಗೆ ಮುಗಿದ್ದರು. ಸಂಜೆ ಹೊತ್ತಿಗೆ ಗ್ರಾಹಕರಿಂದ ತುಂಬಿದ್ದ ಮಾರುಕಟ್ಟೆ ಪ್ರದೇಶದಲ್ಲಿ ವಾಹನಗಳ ಸಂಚಾರ ದಟ್ಟಣೆ ಉಂಟಾಗಿದ್ದರಿಂದ ವಾಹನಗ ಸುಗಮ ಸಂಚಾರಕ್ಕೆ ಪೊಲಿಸರು ಪರದಾಡುವಂತಾಯಿತು.

# ಬಳ್ಳಾರಿ ಜಿಲ್ಲೆಗೆ ಬೇಕಿದೆ 560 ಕೋಟಿ ರೂ. ಬರ ಪರಿಹಾರ

### ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಹೇಳಿಕೆ । ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಕೆ । ಜಿಲ್ಲೆಯಲ್ಲಿ ಶೇ.82 ಬೆಳೆ ನಷ್ಟ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ವಿವಿಧೆಡೆ ಸಂಚರಿಸಿ ಬರ ಪರಿಸ್ಥಿತಿ ವೀಕ್ಷಣೆ ನಡೆಸಿದ ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು, ಜಿಲ್ಲೆಯಲ್ಲಿ ಒಟ್ಟು ಶೇ.82 ಭಾಗದಷ್ಟು ಮಳೆಯಿಲ್ಲದೇ ಬೆಳೆ ಹಾನಿ, ಬರ ನಷ್ಟ ಸೇರಿದಂತೆ ಜಿಲ್ಲೆಗೆ ಒಟ್ಟು ರೂ.560 ಕೋಟಿ ಬರ ಪರಿಹಾರದ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಹೇಳಿದರು.

ಅವರು, ಶನಿವಾರ ಸಂಜೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಬರ ಪರಿಸ್ಥಿತಿ ಕುರಿತು ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಸೂಚನೆಯಂತೆ, ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಅವಲೋಕಿಸಿ, ಇದೇ ತಿಂಗಳ ನ.15 ರೊಳಗಾಗಿ ಅಂತಿಮ ವರದಿ ಸಲ್ಲಿಸುವಂತೆ ನಿರ್ದೇಶಿಸಿದ್ದಾರೆ. ಈ ನಿಟ್ಟಿನಲ್ಲಿ ಬರ ಪರಿಸ್ಥಿತಿ ವೀಕ್ಷಣೆ ನಡೆಸಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ 63,765 ಹೆಕ್ಟೇರ್ ಭೂಮಿ ಸಾಗುವಳಿ ಕ್ಷೇತ್ರವಾಗಿದ್ದು, ಈ ವರ್ಷದ ಮಂಗಾರು ಮಳೆ ಅಭಾವದಿಂದ ಕೇವಲ 1,10,436 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಅಂದರೆ ಶೇ.82ರಷ್ಟು ಮಾತ್ರ ಬಿತ್ತನೆಯಾಗಿದೆ. ಜಿಲ್ಲೆಯಲ್ಲಿ 573 ಮಿ.ಮೀ ವಾಡಿಕೆ ಮಳೆಯಿದ್ದು, ಕೇವಲ 261 ಮೀ.ಮೀ ಪ್ರಮಾಣದಷ್ಟು ಮಳೆಯಾಗಿದೆ ಎಂದು ಸಚಿವರು ತಿಳಿಸಿದರು.



**ತಾಲ್ಲೂಕುವಾರು ಬರ ಪರಿಸ್ಥಿತಿ ಮಾಹಿತಿ:**
ಸಿರುಗುಪ್ಪ ತಾಲ್ಲೂಕಿನಲ್ಲಿ ಒಟ್ಟು 56,406 ಹೆಕ್ಟೇರ್ ಬಿತ್ತನೆಯಲ್ಲಿ 36,281 ಹೆಕ್ಟೇರ್ ಪ್ರದೇಶ ಬರ ಮತ್ತು ಹಾನಿ.

ಕಂಪ್ಲಿ ತಾಲ್ಲೂಕಿನಲ್ಲಿ 20,310 ಹೆಕ್ಟೇರ್ ಬಿತ್ತನೆಯಲ್ಲಿ 656 ಹೆಕ್ಟೇರ್ ಪ್ರದೇಶ ಬರ ಮತ್ತು ಹಾನಿ.

ಕುರುಗೋಡು ತಾಲ್ಲೂಕಿನಲ್ಲಿ 12,612 ಹೆಕ್ಟೇರ್ ಬಿತ್ತನೆಯಲ್ಲಿ 260 ಹೆಕ್ಟೇರ್ ಪ್ರದೇಶ ಬರ ಮತ್ತು ಹಾನಿ.

ಸಂಡೂರು ತಾಲ್ಲೂಕಿನಲ್ಲಿ 30,111 ಹೆಕ್ಟೇರ್ ಬಿತ್ತನೆಯಲ್ಲಿ 26,600 ಹೆಕ್ಟೇರ್ ಪ್ರದೇಶ ಬರ ಮತ್ತು ಹಾನಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು ವಿವರಿಸಿದರು.

ಜಿಲ್ಲೆಗೆ ಈಗಾಗಲೇ ಕೇಂದ್ರ ಬರ ಅಧ್ಯಯನ ತಂಡವು ಸಮೀಕ್ಷೆ ನಡೆಸಿದೆ. ಎನ್.ಡಿ.ಆರ್.ಎಫ್ ಮಾರ್ಗಸೂಚಿ ಅನ್ವಯದಂತೆ 1 ಹೆಕ್ಟೇರ್ ಪ್ರದೇಶದ ಖುಷ್ಕಿ ಬೆಳೆಗೆ ರೂ.8,500 ಪರಿಹಾರ, 1 ಹೆಕ್ಟೇರ್ ಪ್ರದೇಶದ ನೀರಾವರಿ ಬೆಳೆಗೆ ರೂ.17,000 ಪರಿಹಾರ, 1 ಹೆಕ್ಟೇರ್ ಪ್ರದೇಶದ ಬಹುವಾರ್ಷಿಕ ಬೆಳೆಗೆ ರೂ. 22,000 (ತೋಟಗಾರಿಕೆ ಬೆಳೆಗಳಿಗೆ) ಪರಿಹಾರ ನಿಗದಿಪಡಿಸಿದೆ ಎಂದು ವಿವರಿಸಿದರು.

ಸಿರುಗುಪ್ಪ ತಾಲ್ಲೂಕಿನಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ, ಭತ್ತದ ಬೆಳೆ ನೆಲಕ್ಕುರುಳಿದೆ, ಇದಕ್ಕೂ ಪರಿಹಾರ ಒದಗಿಸಲು ಕೃಷಿ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ವರದಿ ನೀಡಲಿದ್ದಾರೆ ಎಂದರು.

ಜಿಲ್ಲೆಯಲ್ಲಿ ಏಪ್ರಿಲ್ ನಿಂದ ಇಲ್ಲಿಯವರೆಗೆ 4 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಅವರಿಗೆ ಈಗಾಗಲೇ ಪರಿಹಾರ ಒದಗಿಸಲಾಗಿದೆ ಎಂದು ಕೃಷಿ ಜಂಟಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ತಿಳಿಸಿದರು.

ಜಿಲ್ಲೆಯಲ್ಲಿ ಮೋಡ ಬಿತ್ತನೆ ಚಿಂತನೆ ಇಲ್ಲ: ಜಿಲ್ಲೆಯಲ್ಲಿ ಭತ್ತದ ಬೆಳೆಯು ಸಾಕಷ್ಟು ಪ್ರಮಾಣದಲ್ಲಿ ಬೆಳೆಯಲಾಗಿದೆ. ಬೆಳೆಯು ತೆನೆ ಬಿಟ್ಟಿರುವ ಹಂತದಲ್ಲಿದೆ. ಜಾಸ್ತಿ ಮಾಳೆಯಾದರೆ, ಭತ್ತ ನೆಲಕ್ಕುರುಳುವ ಸಂಭವವಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಯಾವುದೇ ಮೋಡ ಬಿತ್ತನೆ ಚಿಂತೆ ನಡೆಸಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಪರಿಸರ ಸ್ನೇಹಿ ದೀಪಾವಳಿ ಆಚರಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮತ್ತಿತರು ಹಾಜರಿದ್ದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA